ಪಂಚಮ

ಸಂಪುಟ : 8   ಏಪ್ರಿಲ್ 1984   ಬೆಲೆ 1–00   ಸಂಚಿಕೆ : 6–7

ಏಪ್ರಿಲ್ ೧೪ ಮತ್ತು ೧೫

ಅಸ್ಪೃಶ್ಯ ಜನಾಂಗ ಜಾಗೃತಿ ಸಮ್ಮೇಳನ

ಈ ಏಪ್ರಿಲ್ 14 ಮತ್ತು 15 ರಂದು ಮೈಸೂರು ನಗರದಲ್ಲಿ ಎರಡು ದಿನಗಳ ಕರ್ನಾಟಕ ಅಸ್ಪೃಶ್ಯರ ಸಮ್ಮೇಳನವನ್ನು ಏರ್ಪಡಿಸಲಾಗಿದೆ. ಸಮ್ಮೇಳನದಲ್ಲಿ ಕರ್ನಾಟಕ ರಾಜ್ಯ ಅಸ್ಪೃಶ್ಯ ಜನಾಂಗದ ಮುಖಂಡರುಗಳು, ಸಮಾಜ ಸುಧಾರಕರು, ರಾಜಕಾರಣಿಗಳು, ಪತ್ರಿಕಾಕರ್ತರು, ಸಾಹಿತಿಗಳು, ಜನಾಂಗದ ಸಂಘ ಸಂಸ್ಥೆಗಳು ಮತ್ತು ಸರ್ಕಾರಿ ಅಧಿಕಾರಿಗಳು ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ. ಹೊರ ರಾಜ್ಯಗಳ ಅಸ್ಪೃಶ್ಯ ಜನಾಂಗದ ಮುಖಂಡರುಗಳು ಮತ್ತು ಸಂಘ ಸಂಸ್ಥೆಗಳು ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸುವ ನಿರೀಕ್ಷೆಯಿದೆ. ಅಂಬೇಡ್ಕರ್ ನೆನಪಿನ ಅಂಗವಾಗಿ ಅಸ್ಪೃಶ್ಯ ಜನಾಂಗ ಜಾಗೃತಿ ಸಮಿತಿಯು ಏರ್ಪಡಿಸುತ್ತಿರುವ ಈ ಸಮ್ಮೇಳನದಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಸಮೀಕ್ಷೆ, ವಿಮರ್ಶೆ ಮತ್ತು ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ.

೧) ೧೯೩೨ರ ಪುಣೆಕೌಲು ಕಾರ್ಯಗತದ ಬಗ್ಗೆ ಸಮೀಕ್ಷೆ

ಅಸ್ಪೃಶ್ಯ ಜನಾಂಗಕ್ಕೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪೂರ್ಣ ಸ್ವಾತಂತ್ರ್ಯ ನೀಡುವುದರ ಮುಖೇನ ಮಾತ್ರ ಭಾರತದ ಪೂರ್ಣ ಸ್ವಾತಂತ್ರ್ಯ ಎಂಬುದು 1982ರ ಪುಣೆಕೌಲು ತಿರುಳು. ಪುಣೆಕೌಲು ಆಮರಣಾಂತ ಉಪವಾಸ ಸತ್ಯಾಗ್ರಹದ ಮರಣಶಯ್ಯೆಯಲ್ಲಿದ್ದ ಮಹಾತ್ಮ ಗಾಂಧೀಜಿಯವ[illegible] ಜೀವದಾನ ನೀಡಿತೇ ವಿನಹ ಭಾರತದ ಕೋಟ್ಯಾಂತರ ಅಸ್ಪೃಶ್ಯರಿಗೆ ಏನೊಂದೂ ಸ್ವಾತಂತ್ರ್ಯವನ್ನೂ ನೀಡಲಿಲ್ಲ.

೨) ೧೯೫೦ರಂದು ಭಾರತ ರಾಜ್ಯಾಂಗ ಜಾರಿಗೆ ಬಂದ ನಂತರ ರಾಷ್ಟ್ರದಲ್ಲಿ ಅಸ್ಪೃಶ್ಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸ್ಥಾನಮಾನಗಳ ಬಗ್ಗೆ ಸಮೀಕ್ಷೆ

ಜಿರಾಯ್ತು ಕಸುಬನ್ನು ಅವಲಂಬಿಸಿ ಭೂಮಿಯನ್ನು ನಂಬಿರುವ ಬಹು ಸಂಖ್ಯಾತ ಅಸ್ಪೃಶ್ಯರಿಗೆ 1950 ರಿಂದಲಾದರೂ ಸರ್ಕಾರ ಸರಿಯಾದ ರೀತಿಯಲ್ಲಿ ಭೂ ವಿತರಣೆ ಮಾಡದೆ ಇಂದಿಗೂ ಬಹುಮಂದಿ ಅಸ್ಪೃಶ್ಯರು ಕೃಷಿ ಕಾರ್ಮಿಕರಾಗಿಯೇ ತೊಳಲಾಡುತ್ತಿದ್ದಾರೆ. ಚರ್ಮೋದ್ಯೋಗದಲ್ಲಿ ನಿರತವಾಗಿರುವ ಹಾಗೂ ಇತರ ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳನ್ನು ಮಾಡಬಯಸುವ ಅಸ್ಪೃಶ್ಯ ಜನಾಂಗಕ್ಕೆ ಸರ್ಕಾರ ಪ್ರೋತ್ಸಾಹ ನೀಡುತ್ತಿಲ್ಲ. ಸಮಾಜದ ಬೇರಾವ ಜನಾಂಗವು ಮಾಡದ ಗ್ರಾಮ, ಪಟ್ಟಣ, ಪುರ ಮತ್ತು ನಗರ ನಿರ್ಮಲೀಕರಣ ಕಾರ್ಯ ನಿರತ ಅಸ್ಪೃಶ್ಯರಿಗೆ ಸರ್ಕಾರ ಸಾಕಷ್ಟು ಕನಿಷ್ಠ ಕೂಲಿ ನಿಗಧಿ ಮಾಡಿರುವುದಿಲ್ಲ. ವಸತಿ ಸಮಸ್ಯೆ ನಿವಾರಣೆ ಮಾಡಿರುವುದಿಲ್ಲ. ಕಾರ್ಯ ನಿರ್ವಹಣಾ ಉಡುಪು ಮತ್ತು ಸಲಕರಣೆಗಳನ್ನು ನೀಡಿರುವುದಿಲ್ಲ. 1950 ರಿಂದ ಸರ್ಕಾರದ ಎಲ್ಲಾ ಹುದ್ದೆಗಳಲ್ಲೂ ಶೇಕಡ ಹದಿನೆಂಟು ಭಾಗ ಮೀಸಲಾತಿ ನಿಯಮ ಜಾರಿಯಲ್ಲಿದ್ದಾಗ್ಯೂ ಈಲಾಗಾಯ್ತು ಸರ್ಕಾರ ಶೇಕಡ 4-5 ಭಾಗಗಳಿಗಿನ್ನ ಮೀರಿ ಅಸ್ಪೃಶ್ಯರ ನೇಮಕಾತಿ ಮತ್ತು ಬಡ್ತಿಗಳನ್ನು ಮಾಡಿರುವುದಿಲ್ಲ. ಸರ್ಕಾರದಿಂದ ಧನ ಸಹಾಯ ಪಡೆಯುತ್ತಿರುವ ಹಾಗೂ ಇತರ ಖಾಸಗಿ ಸಂಸ್ಥೆಗಳಲ್ಲಿ ವೃತ್ತಿ ನೇಮಕಾತಿ ಮತ್ತು ಬಡ್ತಿ, ಮೀಸಲಾತಿ ನಿಯಮಗಳನ್ನು ಕಡ್ಡಾಯಗೊಳಿಸದೆ ಖಾಸಗಿ ಸಂಸ್ಥೆಗಳಲ್ಲಿ ಅಸ್ಪೃಶ್ಯರಿಗೆ ಉದ್ಯೋಗವಕಾಶಗಳಿರುವುದಿಲ್ಲ. ಅಸ್ಪೃಶ್ಯ ಜನಾಂಗಗಳಿಗಿರುವ ರಾಜ್ಯಾಂಗ ದತ್ತ ವಿಶೇಷ ಸೌಕರ್ಯ ಸೌಲಭ್ಯ ಸವಲತ್ತು ಮತ್ತು ಮೀಸಲಾತಿ ಉಪಯೋಗಗಳನ್ನು ಬೇರೆ ಜನಾಂಗದ ಹಲವರು ಮೋಸ, ವಂಚನೆಗಳಿಂದ ಪಡೆದುಕೊಂಡು ಅಸ್ಪೃಶ್ಯರಿಗೆ ಉಂಟು ಮಾಡುತ್ತಿರುವ ಅನ್ಯಾಯ ಮತ್ತು ನಷ್ಟಗಳನ್ನು ತಡೆಗಟ್ಟಲು ಸರ್ಕಾರ ವಿಫಲವಾಗಿರುತ್ತದೆ.

ಅಸ್ಪೃಶ್ಯರು ತಮ್ಮದೇ ಆದ ಸ್ವಾಯತ್ತ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳ ಮುಖೇನ ಸ್ವಾವಲಂಭಿಗಳಾಗಿ ಬಾಳಲು ಸರ್ಕಾರ ಪ್ರೋತ್ಸಾಹ ನೀಡುವುದರ ಬದಲು ಅಡೆತಡೆಗಳನ್ನು ಒಡ್ಡುತ್ತಾ ಅದರ ಪುರೋಭಿವೃದ್ಧಿ ಕುಂಠಿತವಾಗಿರುತ್ತದೆ. ಇದರಿಂದ ಅಸ್ಪೃಶ್ಯರಾಗಿ ಕಡು ಬಡವರಾಗಿ ಉಳಿಯುವಂತಹ ವ್ಯವಸ್ಥೆಯಾಗಿರುತ್ತದೆ. 1950ರಲ್ಲಿ ರಾಜ್ಯಾಂಗ ಜಾರಿಗೆ ಬಂದ ನಂತರ ಭಾರತದ ಅಸ್ಪೃಶ್ಯರನ್ನೊಳಗೊಂಡ ಹಿಡಿ ದಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಜನರಿಗೆ ತಕ್ಕಮಟ್ಟಿನ ಆರ್ಥಿಕ, ಸಾಮಾಜಿಕ. ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳು ದೊರೆತಿವೆಯೇ ವಿನಃ ಭಾರತದ ಒಟ್ಟು ಪ್ರಜಾ ಸಂಖ್ಯೆಯ ಐದನೆ ಒಂದು ಭಾಗ ಇರತಕ್ಕ ಎಲ್ಲಾ ಅಸ್ಪೃಶ್ಯ ಜನಾಂಗಕ್ಕೆ ಅಲ್ಲ.

೩) ಅಸ್ಪೃಶ್ಯತಾ ನಿವಾರಣೆಗೆ ಅಸ್ಪೃಶ್ಯರು ಅನುಸರಿಸಬೇಕಾಗಿರುವ ಮಾರ್ಗ

ಅಸ್ಪೃಶ್ಯತೆ ರಾಜ್ಯಾಂಗದಲ್ಲಿ ರದ್ದು ಪಡಿಸಲ್ಪಟ್ಟು ಅಸ್ಪೃಶ್ಯತಾಚರಣೆ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿದ್ದಾಗ್ಯೂ ಅಪರಾಧಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಕಾನೂನಿನಲ್ಲಿ ಸಾಕಷ್ಟು ಅವಕಾಶಗಳಿರುತ್ತವೆ. ಅಸ್ಪೃಶ್ಯತೆ ರಾಷ್ಟ್ರಾದ್ಯಂತ ಒಂದಲ್ಲ ಒಂದು ರೂಪದಲ್ಲಿ ಆಚರಿಸಲ್ಪಡುತ್ತಿದ್ದು ರಾಷ್ಟ್ರೀಯ ಸಮಸ್ಯೆಯಾಗಿಯೇ ಉಳಿದಿದೆ. ಇದರಿಂದ ಅಸ್ಪೃಶ್ಯರ ಮೇಲೆ ಹಿಂಸೆ, ಅತ್ಯಾಚಾರ, ಹಲ್ಲೆ, ದರೋಡೆ, ಕೊಲೆ, ಸುಲಿಗೆ ಮತ್ತು ಶೋಷಣೆಗಳು ನಿರಂತರವಾಗಿ ತಡೆಯಿಲ್ಲದೆ ದೇಶಾದ್ಯಂತ ಜರುಗುತ್ತಲೇ ಇವೆ. ಅಸ್ಪೃಶ್ಯರು ತಯಾರಿಸುವ, ಮಾರಾಟ ಮಾಡುವ ಮತ್ತು ಒದಗಿಸುವ ಸಿದ್ಧಪಡಿಸಿದ ಆಹಾರಪದಾರ್ಥಗಳ ಮೇಲೆ ಸಾಮಾಜಿಕ

(3ನೇ ಪುಟ ನೋಡಿ)

· ನಿರಂತರ ಉದ್ಯೋಗ ಯೋಜನೆ

ದುಡಿಯುವವರಿಗೆ ಬೇಕೆಂದಾಗ ಉದ್ಯೋಗ

❋ ೨೬–೧–೭೮ರಿಂದ ರಾಜ್ಯದ ನಲವತ್ತೈದು ತಾಲ್ಲೂಕುಗಳಲ್ಲಿ ನಿರಂತರ ಉದ್ಯೋಗ ಯೋಜನೆಯ ಆರಂಭ. ಈ ತಾಲ್ಲೂಕುಗಳ ಎಲ್ಲ ಗ್ರಾಮಗಳ ೧೬ ರಿಂದ ೬೦ ವರ್ಷದೊಳಗಿನ ಕೃಷಿ ಕಾರ್ಮಿಕರು ಮತ್ತಿತರ ಕೂಲಿಕಾರರಿಗೆ ಇನ್ನು ಮುಂದೆ ವರ್ಷದ ಯಾವುದೇ ಸಮಯದಲ್ಲಿ ಉದ್ಯೋಗ ನೀಡುವ ಭರವಸೆ.

❋ ಉದ್ಯೋಗ ಬೇಕೆನ್ನುವ ಕೂಲಿಕಾರರು ಸಂಬಂಧಪಟ್ಟ ಗ್ರಾಮ ಲೆಕ್ಕಿಗರು ಅಥವಾ ಪಂಚಾಯಿತಿಯಲ್ಲಿ ಹೆಸರು ನೊಂದಾಯಿಸಬೇಕು. ಹಾಗೆ ನೊಂದಾಯಿಸಿದ ಮೂವತ್ತು ದಿನಗಳೊಳಗೆ ಅವರಿಗೆ ಸರ್ಕಾರ ಕಾಮಗಾರಿ ಕೆಲಸಗಳಲ್ಲಿ ಉದ್ಯೋಗ ಕೊಡಲಾಗುವುದು. ಈ ಉದ್ಯೋಗವನ್ನು ಸಾಮಾನ್ಯವಾಗಿ ಕೂಲಿಕಾರರು ವಾಸಿಸುವ ಗ್ರಾಮಗಳ, ಆರರಿಂದ ಹತ್ತು ಕಿಲೋಮೀಟರ್ ಫಾಸಲೆಯೊಳಗೆ ಒದಗಿಸಲಾಗುವುದು.

❋ ಕೂಲಿಕಾರರ ಗ್ರಾಮಗಳ ಸುತ್ತ ಮುತ್ತ ಸಾಕಷ್ಟು ಉದ್ಯೋಗಾವಕಾಶಗಳಿಲ್ಲದ ಸಂದರ್ಭದಲ್ಲಿ ಹತ್ತಿರದ ಯೋಜನಾ ಪ್ರದೇಶಗಳಲ್ಲಿ ಉದ್ಯೋಗ ಒದಗಿಸಲಾಗುವುದು.

❋ ಗ್ರಾಮೀಣ ಪ್ರದೇಶದ ಕಡುಬಡವರ ಜೀವನ ನಿರ್ವಹಣೆಗೆ ''ನಿರಂತರ ಉದ್ಯೋಗ ಯೋಜನೆ'' ಒಂದು ವರ ಪ್ರಸಾದ. ಲಕ್ಷಾಂತರ ಕೃಷಿ ಕೂಲಿಕಾರರ ಬದುಕಿಗೆ ಇದೊಂದು ಹೊಸ ಆಸರೆ.

❋ ಗ್ರಾಮೀಣ ಜನತೆಯ ನಿರುದ್ಯೋಗ ಮತ್ತು ಬಡತನದ ನಿವಾರಣೆಗೆ ರಾಜ್ಯದ ಸರ್ಕಾರದ ಬೃಹತ್ ಕಾರ್ಯಕ್ರಮ— ''ನಿರಂತರ ಉದ್ಯೋಗ ಯೋಜನೆ''.

ಜನತೆಯ ಆಶೋತ್ತರಗಳಿಗೆ ಸದಾ ಮಿಡಿಯುವ ಸರ್ಕಾರ :— **ಜನತಾ ಸರ್ಕಾರ**

ಕರ್ನಾಟಕ ವಾರ್ತೆ

ನಾಕಂಡ ಗಾಂಧಿ-ನಗರ

ಕೆ. ಎಸ್. ಕೇಶವಪ್ರಸಾದ್

ಪ್ರಕರಣ-1

ಸ್ಥಳ–ಮೈಸೂರಿನ ಗಾಂಧಿನಗರ. ಕಾಲ-ಎರಡು ವರ್ಷಗಳ ಹಿಂದೆ, ರಾತ್ರಿ 10 ಗಂಟೆಯ ಸಮಯ.

ಕೇವಲ ಎರಡೇ ರೂಮುಗಳಿವೆ ಎನ್ನಬಹುದಾದ ಒಂದು ಪುಟ್ಟ ಮನೆಯಲ್ಲಿ ದೊಡ್ಡದಾಗಿ ಗಲಾಟೆ ಕೇಳುತ್ತಿತ್ತು. ಸ್ವಲ್ಪ ದೂರದ ಅಂಗಡಿಯೊಂದರ ಬಳಿ ನಾನು ಸಿಗರೇಟು ಸೇದುತ್ತಾ ನಿಂತೆ, ಜನಗಳು ಆ ಮನೆ ಎದುರು ತಿರುಗಾಡುತ್ತಿದ್ದರೂ ನಿರ್ಲಿಪ್ತರಂತೆ ಹೋಗುತ್ತಿದ್ದರು. ಗಂಡ ಕುಡಿದಿದ್ದ. ಉರ್ದುವಿನಲ್ಲಿ ಬಯ್ಯುತ್ತಾ ಹೆಂಡತಿಗೆ ಹೊಡೆಯುತ್ತಾ ಇದ್ದ. ಆಕೆ ತಿರುಗಿ ಜೋರಾಗಿ ಬಯ್ಯುತ್ತಾ ಕೂಗುತ್ತಾ ಗಲಾಟೆ ಮಾಡುತ್ತಿದ್ದಳು. ಒಂದೆರಡು ಮಕ್ಕಳು ಅಳುತ್ತಿದ್ದರೂ ಯಾರಿಗೂ ಕೇಳುವಂತಿರಲಿಲ್ಲ. ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಈ ವ್ಯಾಪಾರವೇ ನಡೆದಿತ್ತು. ನಂತರಾ ಇದ್ದಕ್ಕಿದ್ದಂತೆಯೇ ಆಕೆ ಬೀದಿಗಿಳಿದಳು, ತಲೆ ಕೆದರಿತ್ತು, ಕೂಗುತ್ತಾ ಎದೆ ಬಡಿದುಕೊಳ್ಳುತ್ತಾ ದಾಪುಗಾಲಿಟ್ಟು ಅದೆಲ್ಲಿಗೋ ಹೊರಟಾಗ ಹುಚ್ಚಿಯಂತೆ ಕಾಣತೊಡಗಿದ್ದಳು. ಆಕೆ ಉರ್ದುವಿನಲ್ಲಿ ಪೋಲಿಸ್‌ಸ್ಟೇಷನ್ನಿಗೆ ಹೋಗುತ್ತಿರುವುದಾಗಿ ಹೇಳಿದಳು.

ನಾನು "ಯಾಕಮ್ಮಾ ಏನು ಗಲಾಟೆ, ಅಳಬೇಡಮ್ಮ" ಅಂತ ಒಂದೆರಡು ಸಮಾಧಾನದ ಮಾತಾಡಲೇ ಎಂದು ಯೋಚಿಸಿ ಒಂದು ಹೆಜ್ಜೆ ಇಡಬೇಕೆನ್ನುವಾಗ ನನ್ನ ನಾಲಿಗೆ ಮತ್ತು ಕೈ ಕಾಲುಗಳು ಚಲನೆಯನ್ನೇ ಕಳೆದುಕೊಂಡುಬಿಟ್ಟಿದ್ದವು. ಅಷ್ಟರಲ್ಲಿ ದೂರದಲ್ಲೆಲ್ಲೋ ಹರಟುತ್ತಾ ನಿಂತಿದ್ದ ಒಂದಿಬ್ಬರು ಮುಸ್ಲಿಂ ಹೆಂಗಸರೂ ಅದಕ್ಕೂ ದೂರದ ಮನೆಯೊಳಗಿದ್ದ ಒಬ್ಬ ಮುಸ್ಲಿಂ ಹೆಂಗಸೂ "ದಿಲ್ಶಾದ್ ದಿಲ್ಶಾದ್" ಎಂದು ಕರೆಯುತ್ತಾ ಓಡೋಡಿ ಬಂದು ಅವಳ ರಟ್ಟೆ ಹಿಡಿದುಕೊಂಡು ದರದರನೆ ಎಳೆದು ಒಂದು ಮನೆಯೊಳಗೆ ಸೇರಿಸಿದರು. ಮನೆಯೊಳಗೆ ಸೇರುವವರೆಗೂ ರಸ್ತೆಯೇ ಇಬ್ಭಾಗವಾಗುವಂತೆ ಕೂಗುತ್ತಿದ್ದ ಆಕೆ ಈಗ ತನ್ನ ಬಾಯಿಯನ್ನು ಬಂದ್ ಮಾಡಿದ್ದಳು. ಯಾವುದೋ ಜಾತ್ರೆಯಲ್ಲಿ ಕರೆಂಟು ಹೋದಾಗ ದುತ್ತನೆ ನೆಲೆಸುವ ಮೌನದ ಥರಾ, ಯಾವುದೋ ಲೋಕದಿಂದ ಹಿಂತಿರುಗಿ ಬಂದಂತೆ ಅನುಭವ ಆಗತೊಡಗಿತು.

ಅಲ್ಲಿಂದ ನಿಧಾನವಾಗಿ ಕಾಲೆಳೆದುಕೊಂಡು ನನ್ನ ರೂಂ ತಲುಪಿದೆ. ರಾತ್ರಿಯೆಲ್ಲಾ ಈ ಘಟನೆ ನೂರೆಂಟು ರೀತಿಯಲ್ಲಿ ಕಾಡಿತು. ಬೆಳಿಗ್ಗೆ ಕುತೂಹಲದಿಂದ ಅದೇ ಅಂಗಡಿಯ ಬಳಿ ಸಿಗರೇಟು ಸೇದುತ್ತಾ ನಿಂತು ಆ ಮನೆಯನ್ನು ವೀಕ್ಷಿಸಿದೆ. ಆಕೆ ತನ್ನ ಮನೆಯೆದುರು ಕೂತು ಮುಸಿಹಿಡಿದ ಒಂದೆರಡು ಪಾತ್ರೆಗಳನ್ನು ಬೆಳಗುತ್ತಿದ್ದಳು. ಗಂಡ ಕುಕ್ಕುರುಕಾಲಲ್ಲಿ ಕೂತು ಮಗುವೊಂದನ್ನು ಎತ್ತಿಕೊಂಡು ಬೀಡಿ ಸೇದುತ್ತಿದ್ದ.

❋ ❋ ❋ ❋

ಮೈಸೂರಿನ ಕೆಲವು ಸೋಷಲಿಸ್ಟರ ದೇಹಗಳಿಗೆ ತುಕ್ಕು ಹಿಡಿಯುತ್ತಿದ್ದ ಸಂಕ್ರಮಣ ಕಾಲದಲ್ಲಿ ನಾನು ಮೈಸೂರಿಗೆ ಕಾಲಿಟ್ಟಿದ್ದೆ. ನವನಿರ್ಮಾಣ, ಎಮರ್ಜನ್ಸಿ ಇತ್ಯಾದಿ, ಇತ್ಯಾದಿಗಳಲ್ಲೆಲ್ಲಾ ತಮ್ಮ ತಲೆ ಮತ್ತು ಕಾಲುಗಳನ್ನು ನನ್ನ ಕಣ್ಣೆದುರಿಗೇ ಕೂರಿಸಿಕೊಂಡಿದ್ದ ಅವರುಗಳನ್ನು ನಾನು ಮೈಸೂರಿಗೆ ಬಂದಾಗಿನಿಂದ ನೋಡುವಾಗಲೆಲ್ಲಾ ಶಾಂತತೆ ಮತ್ತು ಘನ ಗಾಂಭೀರತೆಗಳೇ ಅವರುಗಳ ಮುಖದಲ್ಲಿ ಮನೆಮಾಡಿದ್ದರಿಂದ ಅವರುಗಳು ತಮ್ಮ ಹೋರಾಟ ಮತ್ತು ಚಳುವಳಿಗೆ ಸಂಬಂಧಿಸಿ ಗುಪ್ತವಾಗಿ ಯಾವುದಾದರೂ ಪೆನ್‌ಷನ್ ಪಡೆಯುತ್ತಿದ್ದಾರೋ ಏನೋ ಎಂಬ ಗುಮಾನಿ ಕಾಡುತ್ತಿತ್ತು. ಪೋಲೀಸ್ ಅಧಿಕಾರಿಯಾಗಿರುವ ಗೆಳೆಯ ರಂಗಸ್ವಾಮಿ ಒಂದು ದಿನ ಕೇಳಿದಾ. "ಎಲ್ಲಿ ಮನೆ ಮಾಡಿದೀರಿ ?"

"ಗಾಂಧೀನಗರದಲ್ಲಿ ದೀನಿ. ಮನೆ ಅಲ್ಲ ರೂಂ."

"ಇಡೀ ಮೈಸೂರು ರಾತ್ರಿ 10 ಗಂಟೆಗೆ ಮಲಗಿದ್ರೆ ಗಾಂಧೀನಗರ ಎದ್ದೇಳ್ತಾ ಇರುತ್ತೆ" ಎಂದು ಹೇಳಿ ಮಾತು ನಿಲ್ಲಿಸಿದ. ಸುಮಾರು ಎರಡೂವರೆ ವರ್ಷಗಳಿಂದ ಗಾಂಧಿನಗರದ ಮೂಲೆಯೊಂದರಲ್ಲಿ ವಾಸಿಸುತ್ತಿದ್ದ ನನಗೆ ಇದ್ದಕ್ಕಿದ್ದಂತೆ ಕುತೂಹಲ ಕೆರಳಿತು.

ನಾನು ಬಯಸಿದ್ದ ಉದ್ಯೋಗ ನನಗೆ ಸಿಕ್ಕದೇ ಹೊಟ್ಟೆಪಾಡಿಗಾಗಿ ಬೇರೆ ಉದ್ಯೋಗ ಅವಲಂಬಿಸಿ ಮೈಸೂರಿಗೆ ಬಂದಿದ್ದೆ. ಆ ಉದ್ಯೋಗಕ್ಕೆ ಮಾನಸಿಕವಾಗಿ ತಯಾರಾಗಬೇಕಾಗಿದ್ದ ಹಿಂಸೆಯ ದಿನಗಳಲ್ಲಿ ಏಕಾಂಗಿಯಾಗಿರಲು ತೀವ್ರ ಪ್ರಯತ್ನಪಡತೊಡಗಿದ್ದೆ. ಆ ಪ್ರಯತ್ನದ ದೆಸೆಯಿಂದಾಗಿ ಗಾಂಧೀನಗರದ ರಸ್ತೆಗಳೊಳಗೆ ಹೋಗದೇ ಇದ್ದವನೂ ಏನನ್ನೋ ಸಂಶೋಧಿಸುವವನಂತೆ ತಿರುಗಾಡತೊಡಗಿದೆ.

ಪ್ರಕರಣ-2

ಒಂದು ದಿನ ಬೆಳಿಗ್ಗೆ 10 ಗಂಟೆಗೆ ಮಾಮೂಲಿಯಾಗಿ ಎದ್ದು ಮುಖ ತೊಳೆಯುತ್ತಿದ್ದಾಗ ಅಲ್ಲೇ ಕೆಳಗೆ ಬಾಡಿಗೆ ಮನೆಯಲ್ಲಿರುವ ಕ್ರಿಶ್ಚಿಯನ್ ಮುದುಕ ದ್ವಾರಕೇಶ್ ಸಿನಿಮಾದ ನಗುವೊಂದನ್ನು ನಗುತ್ತಾ ಮಾತಾಡಿಸಿದ. ಆತ ಈ ಹಿಂದೆ ಮಾತಾಡಲು ಪ್ರಯತ್ನಿಸಿದ್ದಾಗಲೆಲ್ಲಾ ನಾನು ಗಂಭೀರನಾಗಿಬಿಡುತ್ತಿದ್ದುದರಿಂದ ಆತ ಮಾತಾಡುವುದನ್ನು ಬಿಟ್ಟುಬಿಟ್ಟಿದ್ದ. ಆತ ಹೇಳಿದ "ನಿನ್ನೆ ನಿಮ್ಮನ್ನೇ ಫಾಲೋ ಮಾಡ್ದೆ ನೀವು ಸ್ಪೀಡಲ್ಲಿ ಹೋಗಿಬಿಟ್ರಿ"

ಅವನು ನಗುನಗುತ್ತಾ ಮಾತಾಡಿದ್ದರಿಂದ ಯಾವುದಕ್ಕೋ ಪೀಠಿಕೆ ಎಂದುಕೊಂಡು "ಯಾಕೆ, ಏನು ಸಮಾಚಾರ" ಎಂದೆ.

"ಒಂದು ಟೆನ್ ರುಪೀಸ್ ಬೇಕಾಗಿತ್ತು"

"ಅಷ್ಟೇ ತಾನೆ, ಬನ್ನಿ ರೂಮಿಗೆ ಕೊಡ್ತೀನಿ ಈಗ್ಲೆ"

"ನಂಗೆ ಪೆನ್‌ಷನ್ ಬರುತ್ಲೂ ಕೊಡ್ತೀನಿ, ಬೇಸ್ರ ಮಾಡ್ಕೋಬೇಡಿ" ಅತಿವಿನಯದಿಂದ ಸಂತೋಷವಾಗಿ ಹಲ್ಲುಕಿರಿದ.

ಅವನು ದುಡ್ಡು ಪಡೆದು ಹೋದ ಸಂಜೆ ಅವನ ಹೆಂಡತಿ ಬಂದು ಗಂಭೀರವಾಗಿ ನನ್ನನ್ನು ಕೇಳಿದಳು "ನೀವ್ಯಾಕೆ ದುಡ್ಡು ಕೊಟ್ರಿ ಅವರಿಗೆ ?" ನಾನು ಕೊಟ್ಟಿದ್ದೇ ಅಪರಾಧ ಎನ್ನುವಂತೆ ಪ್ರಶ್ನೆ ಹಾಕಿದಳು. ಆಕೆಯ ಗಂಡನಿಗೆ ಕೆಟ್ಟ ಹ್ಯಾಬಿಟ್ ಇರಬಹುದೆಂದುಕೊಂಡು ನಾನೇ ಹಲ್ಲುಕಿರಿಯುತ್ತಾ "ಇನ್ನು ಖಂಡಿತಾ ಯಾರಿಗೂ ಕೊಡೋದಿಲ್ಲಮ್ಮ. ಅಂದು ಕಳಿಸಿದೆ. ಅದಾದ ಎರಡು ದಿನಕ್ಕೆ ನನ್ನ ಸಂಶೋಧನೆಯ ಫಲ- ಆ ಮುದುಕ ಮೊದಲಿಂದಲೂ ಮಟ್ಕಾ ಆಡಿ ತನ್ನ ಕುಟುಂಬವನ್ನೇ ದಿವಾಳಿ ಮಾಡಿರುವುದಾಗಿಯೂ, ಅವನ ಒಂದಿಬ್ಬರು ಮಕ್ಕಳು ಪೋಲಿಗಳಾಗಿ ಹಾಳಾಗಿರುವುದಾಗಿಯೂ ಖುದ್ದಾಗಿ ಗೊತ್ತಾಯ್ತು.

❋ ❋ ❋ ❋

ಎಲ್ಲ ವರ್ಗದ ಮತ್ತು ಎಲ್ಲಾ ಜಾತಿ ಧರ್ಮಗಳ ಜನ ವಾಸಿಸುತ್ತಿರುವ ಗಾಂಧೀನಗರದಲ್ಲಿ ಕಡುಬಡವರ ಮನೆಗಳು ಎಷ್ಟಿವೆ ಎಂಬ ಲೆಕ್ಕವೇ ನನಗೆ ಸಿಗದೆ ಹೋಯ್ತು. ಝಗಝಗಿಸುವ ಬಲ್ಬುಗಳ ಅನುಕೂಲಸ್ಥರ ಬೆರಳೆಣಿಕೆಯ ಬಿಲ್ಡಿಂಗುಗಳು, ಗುಡಿಸಿಲುಗಳ ಮುಚ್ಚಲು ಪ್ರಯತ್ನಪಟ್ಟಂತಿರುವ ಲೋವೋಲ್ಟೇಜಿಗೆ ತುತ್ತಾಗಿರುವ ಮಬ್ಬು ಬೆಳಕಿನ ಮಧ್ಯಮವರ್ಗದವರ ಮನೆಗಳು, ಬುಡ್ಡಿಗೆ ಸೀಮೆ ಎಣ್ಣೆ ತರಲು ನಾಲ್ಕಾಣಿಗೆ ಒದ್ದಾಡುವ ಗುಡಿಸಲುಗಳೂ ಸೂರ್ಯ ಮುಳುಗುವ ಹೊತ್ತಲ್ಲಿ ಕಂಡವು.

(15ನೇ ಪುಟಕ್ಕೆ)

ಹಸಿವು ಜಾತಿಯತೆ ಇಲ್ಲದ ಸಮಾಜ ನಿರ್ಮಾಣ: ದಲಿತ ವಿದ್ಯಾರ್ಥಿ ಹೊಣೆ

ಗುಲ್ಬರ್ಗಾ ಜಿಲ್ಲಾ ಮಟ್ಟದ ಪ್ರಥಮ ದಲಿತ ಜಿಲ್ಲಾ ವಿದ್ಯಾರ್ಥಿಗಳ ಎರಡು ದಿನಗಳ ಫೆ-11-12 ಸಮ್ಮೇಳನವನ್ನು ಮಹಾರಾಷ್ಟ್ರದ ದಲಿತ ಪ್ಯಾಂಥರ್ ನಾಯಕರಾದ ಪ್ರೊ.ಅರುಣ ಕಾಂಬಳೆ ಅವರು ಉದ್ಘಾಟಿಸುತ್ತ "ದಲಿತ ಸಂಘಟನೆ ಇಂದಿನ ಅತ್ಯಗತ್ಯ ವಾಸ್ತವವಾಗಿದೆ. ದಲಿತ ಜನಾಂಗದಲ್ಲಿ ಸ್ವಾಭಿಮಾನದ ಚಿಲುಮೆಯನ್ನು ಮೂಡಿಸುವಲ್ಲಿ ಶ್ರಮಿಸಿದ ಬಾಬಾ ಸಾಹೇಬ ಅಂಬೇಡಕರ್ ಅವರ ವಿಚಾರ ಧಾರೆ ನಮ್ಮ ಮಾರ್ಗವಾಗಬೇಕಾಗಿದೆ. ಬ್ರಾಹ್ಮಣವಾದ ಹಾಗೂ ಬಂಡವಾಳಶಾಹಿಗಳಿರಡರ ವಿರುದ್ಧ ನಮ್ಮ ಸಂಘರ್ಷ ನಡೆಯ ಬೇಕಾಗಿದೆ, ಜಾತೀಯತೆ ಹಸಿವುಗಳು ಇಲ್ಲದ ಸಮಾಜ ನಿರ್ಮಾಣದಲ್ಲಿ ದಲಿತ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿದೆ. ಅವರೇ ಇಂಥ ಹೋರಾಟದ ನಾಯಕತ್ವವನ್ನು ವಹಿಸಬೇಕಿದೆ" ಎಂದು ನುಡಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂಟದ ರಾಜ್ಯ ಸಂಚಾಲಕ ಶ್ರೀ ಪಿ.ವೇಲಾಯುಧನ್ ಅವರು ವಹಿಸಿಕೊಂಡಿದ್ದರು. ಅವರು ದಲಿತ ವಿದ್ಯಾರ್ಥಿಗಳು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಹೋರಾಟ ನಡೆಸುವಂತೆ ದಲಿತ ಬಾಂಧವರ ಹಾಗೂ ದೇಶದ ಬಡ ಜನತೆಯ ವಿಮೋಚನೆಗಾಗಿ ಸಂಘರ್ಷವನ್ನು ನಡೆಸಬೇಕೆಂದು ಕರೆ ನೀಡಿದರು.

ಪ್ರಾರಂಭದಲ್ಲಿ ದಲಿತ ಕಲಾ ಮಂಡಳಿಯವರು ಕ್ರಾಂತಿ ಗೀತೆಗಳನ್ನು ಹೇಳಿದರು. ಸಮ್ಮೇಳನಕ್ಕಾಗಿ ವಿಶೇಷವಾಗಿ ನಿರ್ಮಿಸಲಾಗಿದ್ದ ದೇವಯ್ಯ ಹರವೆ ವೇದಿಕೆಯ ಮುಂದೆ ಸಾವಿರ ಸಂಖ್ಯೆಯಲ್ಲಿ ದಲಿತ ವಿದ್ಯಾರ್ಥಿಗಳು ಸೇರಿಕೊಂಡಿದ್ದರು, ಜಿಲ್ಲೆಯ ಶಹಾಪುರ, ಚಿಂಚೋಳಿ, ಅಫಜಲಪುರ, ಆಳಂದ, ಕಮಲಪುರ, ಮಹಾಗಾಂವಗಳಿಂದ ಹಾಗೂ ಬಿಜಾಪುರ, ರಾಯಚೂರು ಜಿಲ್ಲೆಗಳಿಂದ ಬಂದಿದ್ದ ವಿದ್ಯಾರ್ಥಿಗಳಲ್ಲಿ ಅಪಾರ ಉತ್ಸಾಹ ಕಂಡು ಬರುತ್ತಿತ್ತು.

ಅಂದು ಮಧ್ಯಾಹ್ನ ನಡೆದ ಪ್ರಥಮ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ಮಂಡ್ಯ ಜಿಲ್ಲೆಯ ಶ್ರೀ. ವಿ. ಮುನಿವೆಂಕಟಪ್ಪ ಅವರು ವಹಿಸಿ ದಲಿತ ವಿದ್ಯಾರ್ಥಿಗಳ ಸಮಗ್ರವಾಗಿ ಚಿಂತಿಸಬೇಕೆಂದೂ ದಲಿತರ ವಿಮುಕ್ತಿಗಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕೆಂದೂ ನುಡಿದರು.

ಬಹಿರಂಗ ಸಭೆಯಲ್ಲಿ ದಲಿತರನ್ನುದ್ದೇಶಿಸಿ ದಲಿತ ಸಂಘರ್ಷ ಸಮಿತಿಯ ರಾಜ್ಯ ನಿರ್ವಾಹಕರಾದ ಬಿ. ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯ ಹುಟ್ಟು ಮತ್ತು ಅದರ ಅನಿವಾರ್ಯತೆಯನ್ನು ನಿಚ್ಚಳಗೊಳಿಸಿದರು. 1980ರಲ್ಲಿ ಗುಲ್ಬರ್ಗಾದಲ್ಲಿ ಪ್ರತಿಭಟನೆಯ ಹೆಗ್ಗುರುತಾಗಿ ಹುಟ್ಟಿಕೊಳ್ಳಬೇಕಾಯಿತೆಂದುಹೇಳಿದ ಅವರು–ಚಿಂಚನಸೂರೆಂಬಹಳ್ಳಿಯಲ್ಲಿ ದೇವತೆಗೆ ದಲಿತ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿಸುತ್ತಿದ್ದ ಅನ್ಯಾಯದ ವಿರುದ್ಧ ದಲಿತ ಸಂಘರ್ಷ ಸಮಿತಿ ಹುಟ್ಟಿ ಕೊಳ್ಳಬೇಕಾಯಿತು. ಇಂದು ಈ ಸಂಘಟನೆ ತನ್ನ ಬೆಳವಣಿಗೆಯ ಶಕ್ತಿಯನ್ನು ಸ್ಪಷ್ಟಪಡಿಸಿದೆ. 1980ರಲ್ಲಿ ಕೇವಲ ಇಬ್ಬರಿಂದ ಪ್ರಾರಂಭವಾದ ಸಂಘಟನೆ ಈ ದಿನ ಸಹಸ್ರಾರು ದಲಿತರನ್ನು ಒಳಗೊಂಡಿದೆ.

ಜಾತ್ಯಾತೀತ ರಾಷ್ಟ್ರ ನಮಗೆ ಬೇಕು ವರ್ಗರಹಿತ ಸಮಾಜ ನಿರ್ಮಾಣವಾಗಬೇಕೆನ್ನುವುದಾದರೆ ನಾವು ಸಂಘರ್ಷ ಮಾಡಲೇಬೇಕು ಎಂದು ಕರೆ ನೀಡಿದರು.

ನಂತರ ಕಿಕ್ಕಿರಿದಿದ್ದ ದಲಿತ ವಿದ್ಯಾರ್ಥಿಗಳ ಸಭೆಯು ಈಕೆಳಕಂಡ ನಿರ್ಣಯಗಳನ್ನು ಮಾಡಿತು.

1) ಸ್ವಾತಂತ್ರ್ಯ ಬಂದು ಅರ್ಧ ಶತಮಾನ ಕಳೆಯುತ್ತ ಬಂದಿದ್ದರೂ ಸರ್ಕಾರ ಕಡ್ಡಾಯ ವಿದ್ಯಾಭ್ಯಾಸ ಕ್ರಮವನ್ನು ಕಟ್ಟು ನಿಟ್ಟಾಗಿ ಜಾರಿಗೊಳಿಸದಿರುವದು ಇಡೀ ದಲಿತ ಜನಾಂಗಕ್ಕೆ ಎಸಗಿರುವ ಮಹಾದ್ರೋಹವಾಗಿದೆ. ದಲಿತರ ಸರ್ವಮುಖ ಏಳಿಗೆ ದೃಷ್ಟಿಯಿಂದ ಕಡ್ಡಾಯ ಶಿಕ್ಷಣವನ್ನು ಎಲ್ಲ ಹಂತಗಳಲ್ಲಿ ತೀವ್ರ ಆಚರಣೆಗೆ ತರಬೇಕೆಂದು ಈ ಸಮ್ಮೇಳನವು ಆಗ್ರಹ ಪೂರ್ವಕ ಒತ್ತಾಯಿಸುತ್ತದೆ.

2) ಇಂದಿನ ಶಿಕ್ಷಣ ಪದ್ಧತಿ ಮತ್ತು ಪರೀಕ್ಷಾ ವಿಧಾನಗಳು ಜಾತಿವಾದಿ ಮತ್ತು ಬಂಡವಾಳ ವಾದಿ ಪರವಾಗಿದ್ದು ದಲಿತ ವಿರೋಧಿಯಾಗಿರುವುದರಿಂದ ಅವುಗಳು ಜನಪರವಾಗಿರುವಂತೆ ಆಮೂಲಾಗ್ರವಾಗಿ ಬದಲಾವಣೆಯಾಗಬೇಕು.

3) ಶಾಲಾ ಕಾಲೇಜುಗಳಲ್ಲಿ ಅಕ್ರಮವಾಗಿ ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಹಾಗೂ ಡೊನೇಷನ್ ಫೀ ರದ್ದುಗೊಳಿಸಬೇಕು.

4) ಏರುತ್ತಿರುವ ಆಹಾರ ವಸ್ತುಗಳ ಬೆಲೆ ಹಿನ್ನೆಲೆಯಲ್ಲಿ ವಿದ್ಯಾರ್ಥಿ ವೇತನವನ್ನು 250ರೂ.ಗಳಿಗೆ ಹೆಚ್ಚಿಸಬೇಕು.

ವೇಶ್ಯಾ ಬದುಕಿನ ನೋವಿನ ಮುಖಗಳು

ವರದಕ್ಷಿಣೆ

'ನಿನಗೆ ಮದುವೆಯಾಗಿದೆ ; ಅಲ್ಲ?'

'ಹೌದು'

'ಮತ್ತೆ, ಈ ದಂಧೆ ಏಕೆ ಮಾಡ್ತಿದ್ದಿ?

'ಏಕೆಂದರೆ, ನಾನು ಮದುವೆಯಾದಾಗ ವರದಕ್ಷಿಣೆ ತಂದಿರಲಿಲ್ಲ'.

'ಹಾಗಾದರೆ ಒಳ್ಳೆಯ ಕೆಲಸವಾದರೂ ಯಾವುದು ?

ಹುಡುಗಿ ಹೇಳಿದಳು–'ನನ್ನಂಥ ಒಬ್ಬ ಹುಡುಗಿ ಆ ರಾತ್ರಿ ಸುಮ್ಮನೆ ಮನೆಯಲ್ಲಿ ಕುಳಿತು ಕಳೆದದ್ದು ಹೊರಗಡೆ ಹೋಗಿ ಏನೂ ಸಂಪಾದನೆ ಮಾಡದೆ ಇದ್ದದ್ದು ದುಃಖದ ಸಂಗತಿ ಅಲ್ಲವೇನು?'

ನನ್ನಂಥ ಹುಡುಗಿ

ಓರ್ವ ಯುವತಿಯ ಮೇಲೆ ಆಕೆಯ ನಡತೆ ಚೆನ್ನಾಗಿಲ್ಲ ಎಂದು ಕೋರ್ಟ್‌ನಲ್ಲಿ ಮೊಕದ್ದಮೆ ನಡೆಯುತ್ತಿತ್ತು. ವಕೀಲ ಆಕೆಯನ್ನು ಪ್ರಶ್ನಿಸಿದ–'ಜೂನ್ 30ನೇ ತಾರೀಖು ರಾತ್ರಿ ಎಲ್ಲಿದ್ದೆ ನೀನು?'

'ನಾನು ಹೇಳಲು ಇಷ್ಟಪಡುವುದಿಲ್ಲ'

'ನೀನು ಹೇಳಲೇ ಬೇಕು. ಮೊಕದ್ದಮೆಗೆ ಈ ಪ್ರಶ್ನೆಗೆ ನಿನ್ನಿಂದ ಉತ್ತರಬೇಕು.'

'ನಾನು ಮನೆಯಲ್ಲಿ ಕುಳಿತು ಒಂದು ಪತ್ರಿಕೆ ಓದುತ್ತಿದ್ದೆ'

'ಇದೇನು ಕೆಟ್ಟ ಕೆಲಸವಲ್ಲ. ಆದರೂ ಇದನ್ನ ಹೇಳೋಕೆ ಹಿಂದು–ಮುಂದು ಏಕೆ ನೋಡ್ತಿದ್ದೆ.

—ಹಿಂದಿಯಿಂದ : ತಿಪ್ಪೇಸ್ವಾಮಿ

ಚಂದಾದಾರರಿಗೆ ಸೂಚನೆ :

ಪ್ರತಿ ಸಂಚಿಕೆಯನ್ನು ತಪ್ಪದೆ ಎಚ್ಚರಿಕೆಯಿಂದ ಅಂಚೆಗೆ ಹಾಕುತ್ತಿದ್ದೇವೆ. ಇಷ್ಟಾಗಿಯೂ 'ಪಂಚಮ' ಪ್ರತಿಗಳು ತಮಗೆ ತಲಪದಿದ್ದಲ್ಲಿ ದಯ ವಿಟ್ಟು ನಮಗೆ ಒಂದು ಕಾರ್ಡು ಹಾಕಿರಿ.

—ಸಂಪಾದಕ

ಹಿಂದೂ ಧರ್ಮ ಎಂಬ ಅಸಮಾನತೆಗಳ ಕಲ್ಪವೃಕ್ಷ

ಮಾನವನ ಹಿರಿತನ ಇಲ್ಲವೆ? ಕಿರಿತನಗಳನ್ನಳೆಯಲು ಅವನ ನಡವಳಿಕೆಗಳು ಅವನಿಗೆ ದೊರೆಯುವ ಸಾಮಾಜಿಕ ಸ್ಥಾನಮಾನ ಮತ್ತು ಅವನ ಆರ್ಥಿಕಮಟ್ಟಗಳು ಮುಖ್ಯ ಮಾಪನಮಾನ್ಯಗಳೆನ ಬಹುದು. ಪ್ರಪಂಚದ ಮಾನವರೆಲ್ಲರಿಗೂ ಈ ನಿಯಮವು ಅನ್ವಯಿಸುತ್ತದೆ. ಆದರೆ, ನಮ್ಮ ಭಾರತದಲ್ಲಿ, ಅದರಲ್ಲೂ ಹಿಂದೂಧರ್ಮಕ್ಕೆ ಈ ನಿಯಮದ ಅವಶ್ಯಕತೆ ಇಲ್ಲ. ಇಲ್ಲಿನ ಮಾನವತ್ವದ ಮಾಪನಮಾನ ಅವನವನ ಜಾತಿ ಜನ್ಮಾಂತರಗಳು. ಏಕೆಂದರೆ ಈ ಜನಾಂಗಗಳ ಮೂಲಭೂತ ಹಕ್ಕು ಮಾನವರಲ್ಲಿರಬೇಕಾದ ಅಸಮಾನತೆ.

ಎ. ಡಿ. ಕೃಷ್ಣಯ್ಯ

ಹಿಂದೂ ಧರ್ಮವು ಚತುರ್ವರ್ಣಾಶ್ರಮದ ಹೆಸರಿನಲ್ಲಿ ಮಾನವ ವಿಂಗಡಣೆಯನ್ನು ಸೃಷ್ಟಿಸಿ, ತಮ್ಮವರಲ್ಲಿನ ಕೆಲವು ಮಾನವರ ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆಯ ಶೋಷಣೆಗೆ ಪರವಾನಗಿಯನ್ನು ಪಡೆದಿದೆ; ಮಾತ್ರವಲ್ಲ ಈ ತೆರನಾದ ಪರವಾನಗಿಯು ತನ್ನ ಸುಸಂಸ್ಕೃತಿಯ ಹಿರಿಮೆಯನ್ನು ಸಾರುತ್ತಿದೆ ಎಂದೂ ಭ್ರಮಿಸಿದೆ.

ಈ ವರ್ಣವಿಂಗಡಣೆಗಳನ್ನು ಸಾರುವ ವೇದೋಪನಿಷತ್ ಮತ್ತು ಗೀತೆಗಳು ಸೂಚಿಸುವ ಮೂಲ ತತ್ವಗಳು ಇಂದು ಈ ಧರ್ಮದವರಲ್ಲಿಯೇ ಅಪಾರ್ಥಕ್ಕೊಳಗಾಗಿವೆ. ಅಲ್ಲದೆ ಅವು ಬಳಕೆಯಲ್ಲಿಲ್ಲದ, ತತ್ವಹೀನ ಭೋಧನೆಗಳಾಗಿವೆ. ಅಂದರೆ, ಇಂದಿನ ಹಿಂದೂಗಳು ತನ್ನ ಸಮಾಜದವರನ್ನಾಗಲೀ ಇತರರನ್ನಾಗಲೀ ಗುರುತಿಸುವುದು, ಅರ್ಥೈಸುವುದು ಅವನವನು ಜನ್ಮ ತಾಳಿದ ಜಾತಿ ಅಥವಾ ಜನ್ಮಾಂತರಗಳಿಂದ ಮಾತ್ರ "ಇಲ್ಲಿನ ಮಾನವರ ಉತ್ತಮಾಧಮತೆ, ಮೇಲುಕೀಳೆಂಬುದನ್ನು ಅವರ ಜಾತಿಗಳೇ ನಿರ್ಧರಿಸುತ್ತವೆ ಇಂಥಹ ಜಾತಿ, ಜನ್ಮಾಂತರಗಳ ಸೃಷ್ಟಿ ಮತ್ತು ಅಳವಡಿಕೆಗಳು ಈ ಹಿಂದೂಧರ್ಮಿಗಳಿಗ ಹೇಗೆ, ಯಾವ ಕಾಲದಲ್ಲಿ ಮತ್ತು ಏತಕ್ಕಾಗಿ ಉದ್ಭವಿಸಿತೆಂಬುದು ಇಂದಿಗೂ ಅಸ್ಪಷ್ಟ. ಅನಿಧಿಷ್ಟ.

ಈ ಭಾವನೆಗಳನ್ನು ಮೂಢನಂಬಿಕೆ ಎಂದರೆ, ಇವರು ಸಿಡಿದೇಳುವರು. ಕೃತ್ರಿಮ ಎಂದರೆ, ನ್ಯಾಯಬದ್ಧ ಹಾಗೂ ವೈಜ್ಞಾನಿಕವೆಂಬ ಅಣಕು ವಿವರಣೆ ನೀಡುವರು. ಸಕಾರಣಗಳಿಂದ ವಿರೋಧಿಸಿದರೆ, ಎಂತಹ ಹೀನಕೃತ್ಯಗಳಿಂದಲಾದರೂ ಹತ್ತಿಕ್ಕುವರು, ಸಾವಧಾನದಿಂದ ತರ್ಕಿಸಿದರೆ ಮೌನ. ಹೀಗಾಗಿ, ಇವರ ಅಂತರಂಗ ಬಹಿರಂಗಗಳ ಸಂಪೂರ್ಣ ಅರಿವು ಇದುವರೆಗೂ ಸಾಧ್ಯವಿಲ್ಲವಾಗಿದೆ. ಇದರ ಅವಶ್ಯಕತೆಯೂ ಇವರಿಗೆ ಬೇಕಿಲ್ಲವೆನ್ನಲೂಬಹುದು. ಈ ಧರ್ಮದ ಧೃಢನಿರ್ಧಾರ ಮಾನವಮಾನವನ ಅಸಮಾನತೆ, ತಮ್ಮ ಧರ್ಮಿಗಳ ಶೋಷಣೆ, ಅದರಿಂದ ತಮ್ಮ ಹಿರಿತನದ ಘೋಷಣೆಗಳೇ ಆಗಿವೆ.

ಮಾನವನು ಹುಟ್ಟುವ ಸ್ಥಾನ ಮತ್ತು ಪರಿಸರಗಳೇ ಪ್ರಮುಖವೆಂದು ತಿಳಿದು ಹೆಮ್ಮೆಪಡುವ ಈ ಹಿಂದೂಗಳ ಮೂಲಧರ್ಮಬೇರುಗಳು, ಮಹಾಮೂಲಪುರುಷರೆನ್ನಿಸಿಕೊಂಡಿರುವ ಋಷಿ, ಮಹರ್ಷಿಗಳ ಹುಟ್ಟನ್ನು ಇಲ್ಲಿ ಅವಶ್ಯಕವಾಗಿ ಗಮನಿಸೋಣ. ವ್ಯಾಸ ಮಹರ್ಷಿಗಳು ಅಂಬಿಗ ಸ್ತ್ರೀಯಲ್ಲಿ ಜನಿಸಿದವರು. ಪರಾಶರ ಮುನಿಗಳು ಚಂಡಾಲ ಸ್ತ್ರಿಯಲ್ಲಿಯೂ, ಶುಕಮಹರ್ಷಿಗಳು ಹೆಣ್ಣುಗಿಳಿಯಲ್ಲಿಯೂ, ಕಣಾದರು ವೈಶೇಷಿಕ ಶಾಸ್ತ್ರ ಪ್ರವರ್ತಕರು ಹೆಣ್ಣು ಗೂಬೆಯಲ್ಲಿಯೂ,. ವಶಿಷ್ಠ ಮಹರ್ಷಿಗಳು ವೇಶ್ಯೆಯಲ್ಲಿಯೂ, ಮುನಿಶ್ರೇಷ್ಠರಾದ ಮುಂದಪಾಲರು ನಾವಿಕನ ಮಗನಾಗಿಯೂ, ಹುಟ್ಟಿದರು (ಶ್ರೀ ಭವಿಷ್ಯ ಮಹಾಪುರಾಣಂ ಭಾಗ-2, ಅಧ್ಯಾಯ-14) ಹೀಗೆ, ಈ ಧರ್ಮಗಳ ಅನೇಕ ಮೂಲಶ್ರೇಷ್ಠರು ಕೆಳಮಟ್ಟದವರೆಂದು ಅವರೇ ಪರಿಗಣಿಸಿದ ಸ್ತ್ರೀಯರಲ್ಲಿ ಜನಿಸಿದವರೆಂದು, ಅವರ ಧರ್ಮಶಾಸ್ತ್ರಗಳೇ ತಿಳಿಸುವವು. ಹೀಗೆ ಹೀನಸ್ಥಾನಗಳಲ್ಲಿ ಜನಿಸಿದ ಈ ಮಹಾ ಮೂಲಪುರುಷರು ಶ್ರೇಷ್ಠಮಹರ್ಷಿಗಳೆನ್ನಿಸಿಕೊಳ್ಳಲು ಅವರ ಹುಟ್ಟಿದಸ್ಥಾನ ಅಥವಾ ಅವರ ಪರಿಸರಗಳು ಅಡ್ಡಿಯಾಗಲಿಲ್ಲ. ಇವರ ಸಶ್ರಮ ಮತ್ತು ಸಾಧನೆಗಳಿಂದ ಆ ಶ್ರೇಷ್ಠಮಟ್ಟವನ್ನು ಪಡೆರೆಂದು ಒಪ್ಪಿಕೊಳ್ಳುವರು. ಅದು ಸತ್ಯವೂ ಅಹುದು. ಇದಕ್ಕೆ ಸಾಕ್ಷಿಯಾಗಿ, ಹಿಂದೂಧರ್ಮಿಗಳಲ್ಲಿನ ಅನೇಕ ಉತ್ತಮ ವರ್ಗದವರೆಂದು ಕರೆದುಕೊಳ್ಳುವವರಿಗೆ ಈ ಮಹರ್ಷಿಗಳು ಮೂಲ ಪುರುಷರು ! ಇವರು ಇಂತಹವರ ಹೆಸರಿನ ಕುಲ ಗೋತ್ರಗಳನ್ನು (ಅನು ವಂಶಿಕೆಯನ್ನು) ಹೇಳಿಕೊಂಡು ತಮ್ಮ ಉತ್ತಮತನವನ್ನು ಪ್ರದರ್ಶಿಸುತ್ತಿರುವರು. ಇಂತಹವರೇ ಇಂದಿನ ಸಮಾಜದಲ್ಲಿನ ಮುಂದುವರಿದವರೂ ಆಗಿರುವರು. ಈ ದೋಷ ನಿವಾರಣೋಪಾಯವಾಗಿ, "ಋಷಿ, ಸ್ತ್ರೀ ಮತ್ತು ನದೀ ಮೂಲಗಳನ್ನು ಪರೀಕ್ಷಿಸಬಾರದು" ಎಂಬ ನಿಯಮವನ್ನು ನಿರೂಪಿಸಿ ಜಾರಿಗೆ ತಂದಿರುವರು.

ವಿವೇಚಿಸಿದರೆ ಈ ಅಪವಿತ್ರ ಮೂಲವುಳ್ಳವರು ತಮ್ಮ ಸಮಾಜದವರ ಇತರರನ್ನು ಉತ್ತಮಾಧಮರೆಂದು ವಿಂಗಡಿಸಲು ಹೊಂದಿರುವ ಅರ್ಹತೆಯೇನು ? ಅರ್ಹತೆಯು ಖಂಡಿತ ಅವರ ಹುಟ್ಟಿನ ಇಲ್ಲವೇ ಪರಿಸರದಿಂದಂತೂ ಖಂಡಿತ ಅಲ್ಲವೇ ಅಲ್ಲ. ಅದು ಅವರ ಅಪಾರ ಶ್ರಮದಾಯಕ ಜೀವನಕ್ರಮದಿಂದ. ಆದರೆ, ಇಂದು ಈ ಭಾವನೆಯು ವಿಪರ್ಯಾಸವೇಕಾಯಿತು ? ಅಂದರೆ, ಇಂದಿನ ನಮ್ಮ ಹಿಂದೂ ಸಮಾಜವು ಕೇವಲ ಹುಟ್ಟುವಿಕೆ ಅಥವಾ ಅವನ ಜಾತಿಯನ್ನೇ ಪ್ರಧಾನವಾಗಿ ಪರಿಗಣಿಸಿ ಮೇಲು-ಕೀಳು ಜನರೆಂದು ಏತಕ್ಕಾಗಿ ವಿಂಗಡಿಸುವರು ? ಇವರು ಮಾನವೀಯತೆಯ ಮೌಲ್ಯವನ್ನೇಕೆ ಅರಿಯಲೊಲ್ಲರು ? ಈ ಅಮಾನವೀಯತೆಯ ವಿಂಗಡಣೆಯು ತಮ್ಮ ಸಮಾಜದ ಒಟ್ಟಾರೆ ಏಳ್ಗೆಗೆ ಬಾಳಿಗೆ, ಭವಿಷ್ಯಕ್ಕೆ ಮತ್ತು ಅದರ ಉಳಿವು ಅಳಿವಿಕೆಗಳಿಗೆ ತಿದ್ದಿ ತೀರಿಸಲಾರದ ದೋಷವೆಂಬ ಸತ್ಯವನ್ನು ಅರಿತು ಮರೆಮಾಚಿಸುತ್ತಿರುವರೇಕೆ ? ಇದರಿಂದ ಸಮಾಜದ ರಕ್ಷಣೆಯು ಕುಂಠಿತವಾಗುತ್ತಿದೆಯೆಂಬುದನ್ನು ಮನಗಾಣರೆ ?

ಹಿಂದೂ ಧರ್ಮಗ್ರಂಥಗಳಾದ ವೇದೋಪನಿಷತ್‌ಗಳು, ಶಾಸ್ತ್ರ, ಪುರಾಣ, ಸ್ಮೃತಿ, ಶ್ರುತಿ ಮುಂತಾದುವುಗಳು ಅಪಾರ. ಸಂಖ್ಯೆಯಲ್ಲಿವೆ. ಅಲ್ಲಿನ ಜ್ಞಾನ ಭಂಡಾರ ಅಪಾರ, ಆ ಬಗ್ಗೆ ಸಂಶಯಬೇಡ. ಆದರೆ, ಅಂತಹ ಮಹೋನ್ನತ ಜ್ಞಾನ ಭಂಡಾರಗಳಿಂದ ದೊರಕಿಸಿಕೊಂಡು ಅನುಸರಿಸುತ್ತಿರುವುದು ಒಟ್ಟಾರೆ ನಿರಾಶಾದಾಯಕ. ಇಂದು ಈ ಹಿಂದೂ ಧರ್ಮ ಗ್ರಂಥಗಳ ಉಪಯುಕ್ತತೆಯನ್ನು ಅಪ್ಪಾಗಿ ಪಡೆದಿರುವುದಾಗಲೀ ಅವುಗಳ ನೈಜತೆಯನ್ನು ಅರಿತು ಅನುಸರಿಸುವುದಾಗಲೀ ಹಿಂದೂಗಳಲ್ಲಿ ಗೋಚರಿಸದೆ, ಅವುಗಳಿಂದ ವಿಮುಕ್ತರಾಗುತ್ತಿರುವುದೇ ಗೋಚರಿಸುತ್ತಿದೆ. ಭವಿಷ್ಯ ಮಹಾಪುರಾಣದಲ್ಲಿರುವ ಈ ನುಡಿಯನ್ನು ಗಮನಿಸಬಹುದು.

ಆದೀತ್ಯ ಚತುರೋ ವೇದಾ್ಯದಿ ವೃತ್ತೇನ ತಿಷ್ಠತಿ ।
ನ ತ್ರೇನ ಕ್ರಿಯತೆ ಕಾರ್ಯಂ ಸ್ತ್ರೀರತ್ನೇನೇವ ಷಂಡಕಃ॥೯।

ಅಂದರೆ, ನಪುಂಸಕನಿಗೆ ಶ್ರೇಷ್ಠಳಾದ ಸ್ತ್ರೀ ದೊರೆತರೂ, ಅವನು ಹೇಗೆ ಅವಳಿಂದ ಯಾವ

ಕಾರ್ಯವನ್ನು ನೆರವೇರಿಸಿಕೊಳ್ಳಲಾರನೋ ಹಾಗೆಯೇ ಒಬ್ಬನು ನಾಲ್ಕು ವೇದಗಳನ್ನು ಅಧ್ಯಯನ ಮಾಡಿದ್ದರೂ ಇವನಲ್ಲಿ ಒಳ್ಳೆಯ ನಡವಳಿಕೆಗಳಿಲ್ಲದಿದ್ದರೆ, ಇವನಿಂದ ಯಾವ ಕಾರ್ಯವೂ ನಡೆಯುವುದಿಲ್ಲ. ಹಾಗೆಯೇ ಇವನ್ನೂ ಗಮನಿಸಿ.

ಶಿಖಾ ಪ್ರಣವ ಸಂಸ್ಕಾರ ಸಂಧ್ಯೋಪಾಸ ಮೇಖಲಾ ।
ದಂಡಾಜಿನ ಪವಿತ್ರಾದ್ಯಾರೆ ಶೂದ್ರೇಷ್ವಪಿ ನಿರಂಕುಶಾಃ ॥೧೦॥

ಪ್ರಸಂಗೋಪ ಹಿ ಶೂದ್ರಾಣಾಂ ನಶಕ್ಯೋ ವಿನಿವಾರಿತುಂ ।
ದೇವೋತ್ತಮ ತ್ರಯೇಣಾಪಿ ನಿವರ್ತಂತೇ ನರಾಸ್ತ್ವಯಂ ॥೧೧॥

ಅಂದರೆ, ಜುಟ್ಟುಬಿಡುವುದು, ಪ್ರಣವವನ್ನು ಉಚ್ಚರಿಸುವುದು ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡುವುದು, ಸಂಧ್ಯಾವಂದನೆ ಮಾಡುವುದು, ಮೌಂಜಿ, ದಂಡಕೃಷ್ಣಾಜಿನ ಪವಿತ್ರ ಇವನ್ನು ಧರಿವುದು-ಇವುಗಳನ್ನು ಶೂದ್ರರೂ ಮಾಡಲುಅಡ್ಡಿಯಿಲ್ಲ. ಈ ಸಂದರ್ಭಗಳು ಶೂದ್ರರಿಗೆ ದೊರೆಕಿಸಲೇ ಬಾರದೆಂದು ತಡೆಹಿಡಿಯುವುದೂ ಶಕ್ಯವಿಲ್ಲ. ಅಯ್ಯಾದೇವೋತ್ತಮನೆ, ವೇದಾಧ್ಯಯನ ಸದಾಚಾರ, ಶಿಖಾಯಜ್ಞೋಪವೀತ ಧಾರಣಾದಿ ಸಂಸ್ಕಾರಗಳು, ಈ ಮೂರರಿಂದ ಜನರು ತಾವಾಗಿಯೇ ಶೂದ್ರತ್ವದಿಂದ ನಿವೃತ್ತರಾಗುವರು. ಅಂದರೆ, ಮೇಲಿನ ಆಚರಣೆಗಳು ಯ್ಯಾವೊಬ್ಬನ ಇಲ್ಲವೇ ಒಂದು ವರ್ಣದ ಸೊತ್ತಾಗದೆ,ಸರ್ವರು ಆಚರಿಸಲು ಅಡ್ಡಿಯಿಲ್ಲ. ಕೀಳುಜನರೆಂದು ವಿಂಗಡಣೆಗೊಂಡವರಿಗೂ ಆದರಿಂದ ವಿಮೋಚನೆಗೊಳ್ಳುವ ಮಾರ್ಗಗಳನ್ನು ಇವರ ಧರ್ಮಶಾಸ್ತ್ರಗಳು ಸೂಚನೆ ಮತ್ತು ಅವಕಾಶವೀಯುತ್ತವೆ. ಆದರೂ ಈ ಧರ್ಮಾಚಾರಿಗಳು ಇವುಗಳ ಆಚರಣೆಗೆ ಅವಕಾಶ ವಿತ್ತಿದ್ದಾರೆಯೇ ? ಈ ಸಂದರ್ಭದಲ್ಲಿ ಮನುಸ್ಮೃತಿಯ ಈ ಕೆಳಗಿನ ಶ್ಲೋಕವನ್ನು ವಿವೇಚಿಸಬಹುದು :

ಅಜ್ಞೇಭ್ಯೋ ಗ್ರಂಥಿನಃ ಶ್ರೇಷ್ಠಾ ಗ್ರಂಥಿಭ್ಯೋ ಧಾರಿಣೋ ವರಾಃ।
ಧಾರಿಭ್ಯೋಜ್ಞಾನಿನಃ ಶ್ರೇಷ್ಠಾ ಜ್ಞಾನಿಭ್ಯೋ ವ್ಯವಸಾಯಿನಂ॥

(ಮನು-೧೨-೧೦೩)

—ಅಜ್ಞಾನಿಗಳಿಗಿಂತ ಶಾಸ್ತ್ರಗಳನ್ನು ಓದಿದವರು ಶ್ರೇಷ್ಠರು, ಅವರಿಗಿಂತ ಅವುಗಳನ್ನು ಅವರ್ತನೆ ಮಾಡುವವರು ಶ್ರೇಷ್ಠರು, ಅವರಿಗಿಂತಲೂ ಅವುಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡವರು ಶ್ರೇಷ್ಠರು, ಅವರಿಗಿಂತಲೂ ಕಲಿತದ್ದನ್ನು ಅನುಷ್ಠಾನಕ್ಕೆ ಮಾಡುವವರು ಅತಿಶ್ರೇಷ್ಠರು. ಇಂದು ಈ ಹಿಂದೂಗಳು ಈ ವಿವಿಧ ಶ್ರೇಷ್ಠತೆಯ ಮೆಟ್ಟಿಲುಗಳ ಯಾವ ಭಾಗದಲ್ಲಿದ್ದಾರೆಂಬುದನ್ನು ತಿಳಿದಿದ್ದಾರೆಯೇ ? ಇದನ್ನು ಗಮನಿಸಿದ್ದಾರೆಯೇ ವಿವೇಚಿಸಬಹುದು. ಹಾಗೆಯೇ ಮನುವಿನ ಮತ್ತೊಂದು ಶ್ಲೋಕವನ್ನು ಸ್ಮರಿಸಬಹುದು.

ಅವ್ರತಾನಾ ಮಂತ್ರಾಣಾಂ ಜಾತಿಮಾತ್ರೋಪ ಜೀವಿನಾಂ ।
ಸಹಸ್ರಶಃ ಸಮೇತಾನಾಂ ಪರಿಷತ್ವಂ ನ ವಿದ್ಯತೇ

॥(ಮನು-೧೨-೧೧೪)

ಅಂದರೆ ವ್ರತಹೀನರು, ಮಂತ್ರಹೀನರೂ ಆಗಿ ಜಾತಿಯ ಹೆಸರಿನಿಂದ ಮಾತ್ರವೇ ಬದುಕುವ ಜನ ಸಾವಿರ ಸಂಖ್ಯೆಯಲ್ಲಿ ನೆರೆವರೂ, ಆ ಸ್ಥಳ ಸಭೆ ಎನಿಸಲಾರದು. ಹಾಗೆಯೇ ಇದು ಕೇವಲ ಜಾತಿಯ ಹೆಸರಿನಿಂದಲೇ ತಮ್ಮ ಉಚ್ಚತನ ಇಲ್ಲವೇ ನೀಚತನದ ನಡವಳಿಕೆಗಳನ್ನು ಮೆಲುಕು ಹಾಕುವ ಕೋಟ್ಯಾನುಕೋಟಿ ಹಿಂದೂಗಳಿಗೆ ಬರಗಾಲ ವಿಲ್ಲವಲ್ಲವೆ ?

ಇಂದು, ಹಲವು ನಿರ್ದಿಷ್ಟ ವ್ರತಾಚರಣೆಗಳನ್ನು ಅನುಸರಿಸಲೇಬೇಕೆಂಬ ಕಡ್ಡಾಯಕ್ಕೊಳಗಾಗಿರುವ ಹಲವು ಹಿಂದೂಗಳು. ಅವುಗಳನ್ನು ಸಂದರ್ಭ ವರಿತು ಉಪೇಕ್ಷಿಸಬಹುದು. ಇವರು ತಮ್ಮ ಆಚಾರ ವಿಚಾರಗಳಲ್ಲಿ ನವೀನತೆ ಇಲ್ಲವೇ ವಿಭಿನ್ನತೆಯನ್ನು ಪಡೆಯಬಹುದು. ಅದು, ಈ ಧರ್ಮ ಸೂತ್ರಗಳಿಗೆ ವಿರೋಧವಲ್ಲ; ಹಾಗೂ ಅದು ಅಂತಹವರ ಜನ್ಮ ಹಕ್ಕು. ಆಶ್ಚರ್ಯವೆಂದರೆ, ಇವರಂತೆಯೇ ಹಿಂದೂಗಳೆನ್ನಿಸಿಕೊಂಡ ಇನ್ನೂ ಕೆಲವರು, ಅನೂಚಾನವಾಗಿ ಬಂದಿರುವುದೆಂಬ ಬಲಾತ್ಕಾರಕ್ಕೊಳಗಾದ ಹಲವು ಉದ್ಯೋಗಗಳನ್ನು ಅವುಗಳ ಆಚರಣೆಗಳನ್ನು ಎಂದೆಂದೂ, ಯಾವ ಕಾರಣಕ್ಕೂ ಬಿಡಬಾರದು! ಹಾಗೆ ಅವರು ನಡೆದರೆ, ಹಿಂದೂ ಧರ್ಮವನ್ನೂ ಹಾಗೂ ಅದರ ಕರ್ಮಸಿದ್ಧಾಂತವನ್ನೂ ವಿರೋಧಿಸಿದಂತೆ! ಒಬ್ಬ ಅರ್ಚಕ, ಜೋಯಿಸ, ಜಂಗಮ, ಈ ಮೊದಲಾದವರಲ್ಲಿ ಜನಿಸಿದವನು, ತನ್ನ ಅನೂಚಾನದ ಉದ್ಯೋಗ ತೊರೆದು, ಬೇರೆ ಯಾವ ಕಸುಬನ್ನಾದರೂ ಮಾಡಲಡ್ಡಿಯಿಲ್ಲ. ಆದರೆ ಒಬ್ಬ ಚಮ್ಮಾರ, ಕುಂಬಾರ, ಈ ಮುಂತಾದವನು ಅವನ ಉದ್ಯೋಗವನ್ನೆಂದಿಗೂ ಬಿಡಬಾರದು! ಹಾಗೆ ಬದಲಾಯಿಸಿದಲ್ಲಿ ಅದು ಇತರ ಹಿಂದೂಗಳಲ್ಲಿ ಅಪಾರ ಅಸಮಾಧಾನವನ್ನು ಮಾತ್ರವಲ್ಲದೆ ಅಸೂಯೆಯನ್ನೂ ಮೂಡಿಸುವುದು. ಈ ಎರಡನೇ ದರ್ಜೆಯ ಹಿಂದೂಗಳನ್ನು 'ಧರ್ಮ ಮತ್ತು ಕರ್ಮವಿರೋಧಿ'ಗಳೆಂದು ತೀರ್ಮಾನಿಸಿ ಬಹಿಷ್ಕರಿಸುವ ಸಾಧ್ಯತೆಗಳೇ ಹೆಚ್ಚು. ಉದಾಹರಿಸ ಬೇಕೆಂದರೆ, ಒಬ್ಬ ಕೀಳುಗುಂಪಿಗೆ ಸೇರಿದವನು ಗ್ರಾಮಾಂತರ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯನಾಗಿ ಕೆಲಸಕ್ಕೆ ನಿಂತರೆ, ಉತ್ತಮರೆಂದೆನಿಸಿಕೊಂಡ ಅನೇಕರು ಅವನಿಂದ ಯಾವ ಚಿಕಿತ್ಸೆಯನ್ನು ಪಡೆಯಲು ಹಿಂಜರಿಯುವರು.ಆದರೆ ಅನಿವಾರ್ಯಕ್ಕೊಳಗಾದಾಗ,ಒಲ್ಲದ ಮನಸ್ಸಿನಿಂದ ಸಲಹೆ ಪಡೆಯ ಬಹುದು. ಇಲ್ಲಿ ಇವರನ್ನು ಬಾಧಿಸುತ್ತಿರುವುದು ಅವರ ರೋಗ ರುಜಿನಗಳಲ್ಲ ; ಬದಲಾಗಿ ಅವರನ್ನು ಸಂಪೂರ್ಣ ಆವರಿಸಿರುವ ಜಾತಿಭೇದ ಮಾತ್ರ. ಹೀಗೆ ಕೇವಲ ಜಾತಿ ಜನ್ಮಾಂತರಗಳಿಂದಲೇ ತಮ್ಮ ಉತ್ತಮ ತನವನ್ನು ಗುರುತಿಸುವ ಈ ಕಪಟನಾಟಕದ ಹಿಂದೂ ಧರ್ಮ ಹಾಗೂ ಅದರ ಸಮಾಜದಲ್ಲಿ ಸುಪ್ರಪ್ರಳಯವನ್ನೇ ಸೃಷ್ಟಿಸಿಕೊಂಡಿದೆ ಎಂಬುದನ್ನು ತಿಳಿದೂ ಈ ಜಾತಿಭೇದಗಳನ್ನು ರಕ್ಷಿಸಿ ಮುಂದುವರಿಸಿಕೊಳ್ಳಲು ನಿರ್ಧರಿಸುತ್ತಲೇ ಇದ್ದಾರೆ.

ಈ ಬಗ್ಗೆ ಸಂಪೂರ್ಣ ಅರಿವಿಲ್ಲದ್ದರಿಂದ ಈ ದುರ್ಭಾವನೆಗಳು ಮೂಢನಂಬಿಕೆಗಳು ಬೆಳೆದಿವೆ ಎಂಬ ಕುಂಟುನೆಪವನ್ನು ಎಂದೆಂದೂ ಹೇಳಲಾಗದು. ಈ ಭಾವನೆಗಳು ಪರಂಪರಾನುಗತ ಯಾಂತ್ರಿಕವಾಗಿ ಅನುಸರಿಸಿಕೊಂಡೇ ಬಂದಿರುವ ಒಂದು ಕೆಟ್ಟ ಹುಟ್ಟುಗುಣ. ಈ ಗುಣವನ್ನು ಯಾವ ಧನ,ಕನಕ, ಅಮೂಲ್ಯವಸ್ತುಗಳೂ ವಿಮುಕ್ತಿಗೊಳಿಸಲಾರವು. ಇಂತಹವರ ಪ್ರತಿ ಜೀವನಾಡಿಗಳೂ ಈ ಜಾತಿ ಜನ್ಮಾಂತರಗಳ ಸೂಕ್ಷ್ಮ ಸ್ಮರಣೆಯನ್ನು ಮಿಡಿಯುತ್ತಲೇ ಇವೆ. ಇವರು ವಿದ್ಯಾವಂತರಾಗಿರಲಿ, ಧನಿಕರಾಗಿರಲಿ, ಅಧಿಕಾರಿಗಳು, ಸಮಾಜಸುಧಾರಕರು, ಮಠ ಮತ್ತು ಗುರುಪೀಠಗಳಲ್ಲಿ ತಮ್ಮ ಅಣುಕು ಆಧ್ಯಾತ್ಮಿಕ ಧೋರಣೆಗಳಿಂದ ತಮ್ಮವರ ಹಿತಚಿಂತಕರಾಗಿರುವ ಸದ್ಗುರು ಇಲ್ಲವೇ ಜಗದ್ಗುರುವಾಗಿರಲಿ, ನಿಸ್ಸೀಮ ಪರಾಕ್ರಮಿ ಇಲ್ಲವೇ ಅತ್ಯಂತ ಜನಪ್ರಿಯನಾಗಿರಲಿ, ಇವರೆಲ್ಲರ ಅಂತರ್ಯವು ಈ ಜಾತಿಜನ್ಮಾಂತರಗಳನ್ನು ವಿಂದುವಾಗಿ ಮೆಲುಕು ಹಾಕುತ್ತಿರುತ್ತದೆ. ಇವರೆಲ್ಲರೂ ಆತ್ಮಪೂರ್ವಕವಾಗಿ ಈ ಭಾವನೆಗಳನ್ನು ನಿರ್ಮೂಲಗೊಳಿಸಲು ಅವಶ್ಯವಾಗಿ ಬೇಕಾಗಿರುವ ಅಂತಃಶುದ್ಧಿಯನ್ನು ಹೊಂದಿಲ್ಲ. ಆ ಮನಃಪೂರ್ವಕ ಪ್ರಯತ್ನವೂ ಇವರೆಡೆಗೆ ಸುಳಿದಿಲ್ಲ; ಸುಳಿಯಲೂ ಬಾರದಾಗಿದೆ ಏಕೆಂದರೆ, ಇವರ ಧರ್ಮಶಾಸ್ತ್ರಗಳಾದವೇದೋಪನಿಷತ್ತುಗಳು, ಶಾಸ್ತ್ರ, ಪುರಾಣ, ಸ್ಮೃತಿ ಮತ್ತು ಶ್ರುತಿಗಳು ಈ ಉದಾತ್ತ ಭಾವನೆಗೆ ಅವಕಾಶವೀಯುತ್ತಿಲ್ಲವೆಂಬದೃಢಭಾವನೆಯಿಂದಈ ಧರ್ಮಗ್ರಂಥಗಳನ್ನು ಆ ಭಗವಂತನೇ ನಾಲ್ಕು ಜನ ಮಹಾಮುನಿಗಳ ಮುಖಾಂತರ ಈ ಸನಾತನಿಗಳಿಗೆ ನೀಡಿರುವ ದಿವ್ಯಜ್ಞಾನವೆಂಬ ನಂಬಿಕೆಯಲ್ಲಿಯೇ ಇದ್ದಾರೆ. ಇದರೊಂದಿಗೆ ಪೂರ್ವಜನ್ಮಸಂಸ್ಕಾರ ಅಥವಾ ಪುನರ್ಜನ್ಮದ ಕರ್ಮಫಲಗಳ ಅರಿವು ಮಿತಿಮೀರಿ ಎಡೆಮಾಡಿಕೊಂಡಿದೆ. ಇವೆಲ್ಲವನ್ನೂ ವಿವೇಚಿಸಿದರೆ ಆ ಭಗವಂತನನ್ನೂ ಇವರ ದುರ್ಭಾವನೆಗಳ ಕ್ರೂರ

ಶಾಪಕ್ಕೆ ಹೊಣೆ ಮಾಡಿರುವುದು ಪರಮಾಶ್ಚರ್ಯ ! ಈ ದೃಢ ಭಾವನೆಗಳನ್ನು ನಿರೂಪಿಸಿರುವ ಮನು ಸ್ಮೃತಿಯ ಕೆಲವು ಶ್ಲೋಕಗಳನ್ನು ಇಲ್ಲಿ ಗಮನಿಸ ಬಹುದು.

ಯೋಽವ ಮನ್ಯೇಕತೆ ಮೂಲೇಹೇತು ಶಾಸ್ತ್ರಾಶ್ರಯಾ ದ್ವಿಜಃ ।
ಸ ಸಾಧುಭಿರ್ಬಹಿಷ್ಕಾರ್ಯೋ ನಾಸ್ತಿಕೋ ವೇದನಿಂದಕಃ
॥ಮನು–೨–೧೦॥

—ವೇದಗಳನ್ನು, ಅವುಗಳನ್ನು ಸ್ಪಷ್ಟೀಕರಿಸಲು ಆಪ್ತ ಪುರುಷೋತ್ತಮರಿಂದ ರಚಿತವಾದ ಶಾಸ್ತ್ರ ಗಳನ್ನು ಅಪಮಾನಪಡಿಸುವ ವೇದ ನಿಂದಕನಾದ ನಾಸ್ತಿಕನನ್ನು ಸಮಾಜದಿಂದಲೂ, ಕೊನೆಗೆ ದೇಶ ದಿಂದಲೂ ಬಹಿಷ್ಕರಿಸಬೇಕು. ಅಲ್ಲದೆ ಇದನ್ನು ಗಮನಿಸಿ.

ಅರ್ಥಕಾಮೇಷ್ವಸಕ್ತಾನಾಂ ಧರ್ಮಜ್ಞಾನ ವಿಧೀಯತೇ ।
ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮ ಶ್ರುತಿಃ
॥ಮನು–೨–೧೩॥

—ಯಾರು ಚಿನ್ನ, ರತ್ನ, ಸ್ತ್ರೀಸಂಗ ಮೊದಲಾ ದುವುಗಳಲ್ಲಿ ಸಿಕ್ಕಿ ಬೀಳುವುದಿಲ್ಲವೋ ಅವರಿಗೆ ಧರ್ಮಜ್ಞಾನವಾಗುವುದು. ವೇದಗಳ ಮೂಲಕವೇ ಧರ್ಮ ನಿರ್ಧಾರವಾಗಬೇಕು. ಏಕೆಂದರೆ, ವೇದಗಳ ನ್ನು ಒಟ್ಟು ಧರ್ಮಾಧರ್ಮಗಳ ನಿರ್ಣಯವು ಸಾಧು ವಲ್ಲ ಎಂದು ತಿಳಿಸುತ್ತದೆ ಅಂದರೆ ಹಿಂದೂಧರ್ಮ ಗಳಿಗೆ ವೇದಗಳು ಮೂಲವೆಂಬುದನ್ನು ಮರೆಯು ವಂತಿಲ್ಲ.

ಇಂತಹ ವೇದಗಳಲ್ಲೊಂದಾದ ಋಗ್ವೇದದಲ್ಲಿ ಅಧ್ಯಾಯ–೩೧, ಶ್ಲೋಕ–೧೧ ರಿಂದ, ಚತುರ್ವ ರ್ಣಾಶ್ರಮದಡಿಯಲ್ಲಿ ವಿಂಗಡಣೆಗೊಳಗಾದ ಹಿಂದೂ ಜನರಲ್ಲಿನ, ಬ್ರಾಹ್ಮಣರು ಈಶನ ಮುಖ ದಿಂದಲೂ. ಕ್ಷತ್ರಿಯರು ಅವನ ಭುಜದಿಂದಲೂ, ವೈಶ್ಯರು ಅವನ ತೊಡೆಗಳಿಂದಲೂ, ಅವನ ಪಾದ ಗಳಿಂದ ಶೂದ್ರರು ಹುಟ್ಟಿದರೆಂದು ಹೇಳಿದೆ. ಇದರ ಗೂಡಾರ್ಥವೇ ಬೇರೆ ಇದ್ದರೂ, ಜನಸಾಮಾನ್ಯರಲ್ಲಿ ಇದುವರೆಗೂ ತಿಳಿದಿರುವುದು ಅಪಾರ್ಥ ಮಾತ್ರ. ಅಂದರೆ ದೇವನತಲೆ,ತೋಳುಗಳು ಪವಿತ್ರವೆಂತಲೂ ತೊಡೆ ಮತ್ತು ಪಾದಗಳು ಅಪವಿತ್ರವೆಂಬ ಕಲ್ಪನೆ ಮೂಡಿಸಿ, ಏನೆಲ್ಲಾ ದುರ್ಭಾವನೆಗಳನ್ನು ಭೋಧಿ ಸಿ, ಇವರಿವರಲ್ಲಿಯೇ ಉತ್ತಮಾಧಮ, ಮೇಲು– ಕೀಳೆಂಬ ಗುಂಪುಗಳನ್ನಾಗಿ ವಿಂಗಡಿಸಿ, ಮಾನವ ಮಾನವನ ಸಮಾನತೆಗೆ, ಅವನ ಸಮಾನ ಹಕ್ಕು ಬಾಧ್ಯತೆಗಳಿಗೆ ಸಂಪೂರ್ಣ ಧಕ್ಕೆಯನ್ನು ತಂದೊಡ್ಡಿ ದ್ದಾರೆ. ಈ ವಿಧವಾದ ಉತ್ತಮಾಧಮ ಮಾನವ ಸೃಷ್ಟಿಯು ಆ ಭಗನಂತನ ಅಪೇಕ್ಷೆಯಾಗಿದ್ದಲ್ಲಿ, ತತ್ಸಂಬಂಧದ ವೇದವಾಣಿಯು ನಿಜವಾಗಿದ್ದಲ್ಲಿ, ಎಂದೆಂದೂ ಅಬ್ರಾಹ್ಮಣ ಕ್ಷತ್ರಿಯ, ವೈಶ್ಯ ಮತ್ತು ಶೂದ್ರರು ಆ ದೇವನ ನಿಯಂತ ಅಂಗಾಂಗಗಳಿಂದಲೇ ಉತ್ಪತ್ತಿಯಾಗಬೇಕಾಗುತ್ತದೆ. ಆದರೆ, ಈ ಹಿಂದೂ ಗಳಲ್ಲಿನ ಉತ್ತಮಾಧಮ ಗುಂಪಿನವರೆಲ್ಲರೂ, ಪ್ರಕೃ ತಿಯ ನಿಯಮದಂತೆ ಯೋನಿಜರಾಗಿರುವರು ; ಮಾತ್ರವಲ್ಲದೆ, ಏಕ ವಿಧದ ಬೆಳವಣಿಗೆ, ಆಕಾರ, ಸಾವು ನೋವುಗಳಿಗೊಳಪಟ್ಟು, ವಿಶ್ವದ ಇತರ ಮಾನವರಿಂದ ಯಾವ ದೈಹಿಕ ಬದಲಾವಣೆಗಳನ್ನೂ ತೋರದಿರುವುದು ಪರಮಾಶ್ಚರ್ಯವಲ್ಲವೆ ? ಇಂತಹ ಅನೇಕ ಕೌತುಕ, ಅಸಂಬದ್ಧ ವಿಪರ್ಯಾಸ ಗಳನ್ನು ಭೋಧಿಸುವ ಈ ಜ್ಞಾನ ಭಂಡಾರಗಳು ನೈಜಮಾನವೀಯತೆಯ ನೆಲೆ–ಸಲೆಗಳನ್ನು ತಿಳಿಸ ಲಿಲ್ಲವೇಕೆ ?

ಮುಂಡಕೋಪನಿಷತ್‌ನ ಈ ಶ್ಲೋಕವನ್ನು ಪರಿಶೀಲಿ ಸೋಣ :

ದಿವ್ಯೋಹ್ಯ ಮೂರ್ತಃ ಪುರುಷಸ್ಸ ಬಾಹ್ಯಭ್ಯಂತ ರೋಹ್ಯಜಃ ।
ಅಪ್ರಾಣೋಹ್ಯ ಮನಾಶ್ಶು ಭ್ರೋಹ್ಯಕ್ಷರಾತ ಪರಾತ್ಪರಾಃ॥

ಮುಂಡಕ–2–1–2 ಇದು ಭಗವಂತನನ್ನು ವರ್ಣಿಸುವ ಒಂದು ಮೂಲ ಶ್ಲೋಕ ಭಗವಂತನೆಂ ಬುವನು ದಿವ್ಯ ಶುದ್ಧನು, ಅಮೂರ್ತನು ಸರ್ವತ್ರ ಪರಿಪೂರ್ಣನು, ಒಳಗೂ ಹೊರಗೂ ನಿರಂತರ ವ್ಯಾಪಿಸಿರುವವನು, ಅಜನಾ, ಹುಟ್ಟು ಸಾವು ಶರೀ ರಧಾರಣಾರಹಿತನು, ಶ್ವಾಸಪ್ರಶ್ವಾಸಗಳು, ಶರೀರ ಮತ್ತು ಮನಸ್ಸು ಸಂಬಂಧವಿಲ್ಲದೆ ಪ್ರಕಾಶ ಸ್ವರೂ ಪನು ಎಂದು ಮುಂತಾಗಿ ವರ್ಣಿಸಿರುವುದು. ಇಂತ ಹ ದೇವನಿಗೆ ಶರೀರ ಕಲ್ಪನೆ, ಅದರ ವಿವಿಧ ಭಾಗ ಗಳಿಂದ ಚತುರ್ವರ್ಣಾತ್ಮಕರ ಉತ್ಪತ್ತಿ ಮತ್ತು ಅವುಗಳ ತಾರತಮ್ಯಗಳು ಕೇವಲ ಕಲ್ಪನೆಯ ಕೃತ್ರಿ ಮವಲ್ಲವೇ ? ಇದೇ ವೇದೋಪನಿಷತ್ತುಗಳು ಮತ್ತೊಂದೆಡೆ ಆ ಭಗವಂತನನ್ನು ಸರ್ವಾಂತರ್ಯಾಮಿ ಸರ್ವಶಕ್ತಿ, ಸರ್ವ ಚೇತನ ಸ್ವರೂಪ, ನಿರ್ಗುಣ, ನಿರಾಕಾರ, ಸರ್ವಲೋಕ ರಕ್ಷಕ ಸರ್ವಸೃಷ್ಟಿಕರ್ತ, ಅಮೃತ, ಸಚ್ಚಿದ್ರೂಪ, ಅವಿಕಾರಿ, ಸಕಲ ಜೀವರಾಶಿಗಳಲ್ಲಿ ತಾನೇ ತಾನಾಗಿಯೇ ಚೇತನಸ್ವರೂಪನಾಗಿರುವನು, ಅನಂ ತನು ಅಪಾರ ಮಹಿಮನು, ಈ ವಿಧವಾದ ಸಹಸ್ರ ಸಹಸ್ರ ಗುಣನಾಮ ವಿಶೇಷಣಗಳಿಂದ ಹೊಗಳಿ ಆತನ ವರ್ಣನೆಯನ್ನು ನೀಡುವುವು. ಇಂತಹ ಆಕಾ ರವೇ ಇಲ್ಲದ ದೇವನಿಗೆ ತಲೆ, ಭುಜ, ತೊಡೆ ಪಾದ ಗಳೆಲ್ಲಿಂದ ಬಂದವು ? ಈ ಅಂಗಾಂಗಗಳಲ್ಲಿ ಜನಿಸಿ ರುವರೆಂದು ಹೇಳಿಕೊಳ್ಳುವ ಈ ಹಿಂದೂಗಳು ವಿಶ್ವದ ಇತರ ಎಲ್ಲಾ ಮಾನವ ಕೋಟಿಗೆ ಅನ್ವಯಿ ಸಿರುವ ಯಾವ ಪ್ರಕೃತಿ ನಿಯಮಗಳಿಂದ ವಿಭಿನ್ನ ರಾಗಿದ್ದಾರೆಂಬುದನ್ನು ಈ ವೇದಗಳೇಕೆ ಶೃತಪಡಿ ಸುತ್ತಿಲ್ಲ ? ಆ ದೇವನನ್ನು ಅಣುರೇಣು ತೃಣಕಾಷ್ಠ ಗಳಲ್ಲಿಯೂ, ಸರ್ವಜೀವಜಂತುಗಳ ಪ್ರಾಣಿಗಳ ಅಂತರ್ಯದಲ್ಲಿಯೂ, ಸಾಕಾರನಾಗಿ ಪ್ರಕಾಶಗೊಳಿಸು ತ್ತಿರುವನೆಂದು ನಂಬಿರುವ ಇವರ ಧರ್ಮವು ತಮ್ಮ ಜನರನ್ನೇ ಅಮಾನವೀಯತೆಯ ದೃಷ್ಟಿಯಿಂದ ನಡೆಸಿಕೊಳ್ಳುವಂತೆ ಯಾವ ಪ್ರೇರೇಪಣೆಯನ್ನು ನೀಡಿರುವುದು ? ಅಂದರೆ, ಇವರ ಧರ್ಮಾಚರಣೆ ಗಳನ್ನು ಪಾಲಿಸಿಕೊಂಡು, ಇವರ ಸಮಾಜದವರಾಗಿ ಇವರು ಸೂಚಿಸಿರುವ ಧರ್ಮಗಳನ್ನು ಇದುವರೆಗೂ ಉಳಿಸಿಕೊಂಡೇ ಬಂದಿರುವ ಹಲವರ ಸಮಾನತೆಗೆ ಇವರು ಇದುವರೆವಿಗೂ ಏಕೆ ಎಡೆ ಕೊಟ್ಟಿಲ್ಲ ? ಈ ಜಿಜ್ಞಾಸೆಗೆ ಇದುವರೆಗೂ ಯಾರಿಂದಲೂ ಸಮಂಜಸ ಕಾರಣಗಳು ದೊರೆಯುತ್ತಿಲ್ಲ.

ಭಾರತ ದೇಶವು ಪುಣ್ಯಭೂಮಿ, ಇದು ಭಗವಂ ತನ ನಿವಾಸ ಸ್ಥಾನವಾಗಿ, ಅನೇಕ ಪವಿತ್ರ ಪರ್ವತ ಸ್ತೋಮಗಳಿಂದಲೂ, ಮಹಾಪುಣ್ಯ ನದಿಗಳಾದ ಗಂಗಾ, ಸಿಂಧು, ಕಾವೇರಿ ಈ ಮೊದಲಾದ ಪಾಪ ನಾಶಿನಿಗಳನ್ನು ಮಹಾಮಹಾ ಪುಣ್ಯಕ್ಷೇತ್ರಗಳನ್ನೂ ಹೊಂದಿ, ಇಡೀ ವಿಶ್ವದಲ್ಲಿಯೇ ಅತಿ ಪ್ರಮುಖ ಪುಣ್ಯನಾಡು ಎಂಬ ಕೀರ್ತಿಗಳಿಸಿದೆ. ಇಂತಹ ಶತ ಕೋಟಿ ಪುಣ್ಯಧಾಮಗಳಿದ್ದು, ಇಲ್ಲಿಯೇ ಜನಿಸಿ, ಇವರ ಧರ್ಮಾಚರಣೆಗಳನ್ನು ಪಾಲಿಸಿಕೊಂಡು ಜೀವಿಸುತ್ತಿದ್ದರೂ, ಇವರಲ್ಲಿನ ಅನೇಕರ ಪಾಪಗಳು ಪರಿಹಾರ ಕಂಡಿಲ್ಲವೇಕೆ ? ಪ್ರಕೃತಿದತ್ತವಾದ ಪಾಪ ನಾಶಿನಿಗಳೂ, ಪುಣ್ಯಭೂಮಿ ಎಂಬುದು ಅನೃತವೇ? ಈ ಧರ್ಮಗಳು ಆ ಭಗವಂತನನ್ನು ಅವನ ಅಪಾರ ಮಹಿಮೆಗಳನ್ನು, ಅವನ ಮಾಯಾಲೀಲೆಗಳನ್ನು ಅತಿಯಾಗಿ ವಿಂಗಡಿಸಿ. ವಿವರಿಸಿ, ವಿವೇಚಿಸಿ, ಜನಜೀ ವನದಲ್ಲಿ ಅವರ್ಣನೀಯ ಅನುಮಾನಗಳಿಗೆ ಅನುವು ಮಾಡಿದೆ, ಇವರ ಕೃತ್ರಿಮ ಕಲ್ಪನೆಗೆ, ಮಾನವ- ಮಾನವನ ಅಸಮಾನತೆಯ ವಿಪರ್ಯಾಸಗಳ ಪಾಪ ಕೂಪಕ್ಕೆ ಆ ಭಗವಂತನನ್ನು ಎಳೆತಂದಿರುವುದು ಸೋಜಿಗ !

ಕೋಟ್ಯಾನುಕೋಟಿ ಜೀವರಾಶಿಗಳಲ್ಲೆಲ್ಲಾ ಮಾನವ ಜನ್ಮ ಬಹುದೊಡ್ಡದು ಎಂದು ಸಾರುವ ಈ ಧರ್ಮವೂ, ಇವರಲ್ಲಿನ ಮಾನವರನ್ನು ಅತಿ ಕೀಳಾಗಿ ಕಾಣುವುದನ್ನು ಸಹಿಸಿದೆ. ಇವರು ಇನ್ನೂ ಮುಂದುವರಿದು, ಮಾನವರಲ್ಲಿ ಜೀವ, ಜೀವಾತ್ಮ, ದೇಹ, ಬುದ್ಧಿ, ಮನಸ್ಸು, ಇಂದ್ರಿಯಗಳು ಈ ಮುಂತಾದವುಗಳ ಬಗ್ಗೆ ಅಪಾರ ತಿಳಿವಳಿಕೆಗಳನ್ನು ಪಡೆದು, ಆತ್ಮ, ಅದರ ಅರಿವು, ಬಂಧ-ಮೋಕ್ಷಗ ಳೆಂಬ ಜೀವನದ ಅನೇಕ ಸೂಕ್ಷ್ಮತೆಯನ್ನು ಇಲ್ಲಿನ ತಪಸ್ವಿಗಳು ಮತ್ತು ತತ್ವಜ್ಞಾನಿಗಳು ವಿವರಿಸಿರು

ವರು. ಈ ಸನ್ನಿವೇಶಗಳಲ್ಲಿ, ಸಕಲ ಜೀವರಾಶಿಗಳಲ್ಲಿಯೂ ಭಗವಂತನೇ ಸಾಕ್ಷೀ ಭೂತನಾಗಿ, ಆತ್ಮರೂಢನಾಗಿ ಗೋಚರಿಸುತ್ತಿರುವನೆಂತಲೂ, ಅವನ ಪ್ರೇರಣೆಯಿಲ್ಲದೆ, ಒಂದು ಹುಲ್ಲುಕಡ್ಡಿಯೂ ಅಲುಗಾಡಲಾರದೆಂಬ ಮಹತ್ವವನ್ನು ನಿರೂಪಿಸಿದ ಈ ಧರ್ಮ. ಇಂತಹ ಧರ್ಮಗಳು ಅಮಾನವೀಯತೆಯ ಸರ್ವಲಕ್ಷಣಗಳನ್ನು ಅಂಜದೆ, ಅಳುಕದೆ ಪಾಲಿಸಿಕೊಂಡು ಬರುತ್ತಿರುವುದೇಕೆ? ತಿಳಿಯದೆ ಮಾಡುವ ಅಪರಾಧ ಕ್ಷಮಾರ್ಹ. ಆದರೆ ತಿಳಿದೂ ತಿಳಿದೂ ಪರಂಪರಾನುಗತ ಅಪರಾಧ ಎಸಗುತ್ತಿರುವುದು ಇಡೀ ಮಾನವ'ಕೋಟಿಗೆ ಎಸಗುವ ದ್ರೋಹ ಎಂಬುದನ್ನು ಯಾರೂ ನಿರಾಕರಿಸಲಾರರು. ಇದನ್ನು ಆತ್ಮವಂಚನೆ ಎಂದರೂ ತಪ್ಪಲ್ಲವಲ್ಲವೇ ?

ಇಂದು ಹಿಂದೂ ಧರ್ಮಿಗಳು ತಳೆದಿರುವ ಈ ಅಮಾನವೀಯತೆಯ ವಿಲಕ್ಷಣಗಳನ್ನು ಯಾವೊಬ್ಬ ಬುದ್ಧಿಜೀವಿಯೂ ಒಪ್ಪಲಾರರು. ಇತ್ತೀಚೆಗೆ ಈ ಹಿಂದೂಗಳಲ್ಲಿ ಕಾಣಬರುವ ಮಾನವ-ಮಾನವನಲ್ಲಿನ ಅಸಮಾನತೆ ಹಾಗೂ ದುರ್ಭಾವನೆಗಳು ತುಂಬಾ ನವೀನತೆಯನ್ನು ಪಡೆದಿವೆ. ಅದೇನೆಂದರೆ, ಬಹಿರಂಗವಾಗಿ ಈ ಜಾತಿಜನ್ಮಾಂತರಗಳು ಹಾಗೂ ಅವುಗಳ ಪ್ರಧಾನಗಣನೆಯು ಅವೈಜ್ಞಾನಿಕ ಮತ್ತು ಅನಾಗರೀಕತೆಯ ಲಕ್ಷಣಗಳೆಂದು ಎಲ್ಲಾ ವರ್ಗದ ಹಿಂದೂಗಳು ಒಪ್ಪಿಕೊಳ್ಳುವರು ; ಇದು ಕೆಲವೇ ಕೃತ್ರಿಮಗಳ ದುಷ್ಕೃತ್ಯಗಳೆಂದೂ [ವಿವರಿಸುವರು. ಆದರೆ, ಇವರೆಲ್ಲರೂ ತಮ್ಮ ಅಂತರಂಗದಲ್ಲಿ ಈ ಬಗ್ಗೆ ಅಪಾರ ಗೊಂದಲ ಮತ್ತು ಕಳವಳಗಳಿಗೀಡಾಗಿದ್ದಾರೆ. ಅನೂಚಾನ ಈ ಮೌಢ್ಯಗಳಿಂದ ವಿಮೋಚನೆ ಕಾಣದೆ ಪರಿತಪಿಸುತ್ತಿದ್ದಾರೆ. ಇವರು ಇಂತಹ ಸಮಾಜ ಘಾತುಕದ ಸನ್ನಿವೇಶಗಳನ್ನು ಪರಿಶೀಲಿಸುವ, ಇಲ್ಲವೇ ಪರಿಷ್ಕರಿಸಿ ಪರಿಹಾರ ಕಾಣುವ ಗೋಜಿಗೆ ಹೋಗದೆ, ಯಾಂತ್ರಿಕವಾಗಿ ಈ ನಂಬಿಕೆಗಳನ್ನು ಮುಂದುವರಿಸಿಕೊಂಡೇ ಬರುತ್ತಿದ್ದಾರೆ. ಮಾನವ-ಮಾನವನ ಸಮತಾ ಭಾವನೆ, ಸಮಾನ ಹಕ್ಕು ಬಾಧ್ಯತೆಗಳಿಗೆ ಒಟ್ಟಾರೆ ಮಾನವೀಯತೆಯ ಮೌಲ್ಯದ ಅರಿವನ್ನು ಹೊಂದಲು ಇವರ ಗಮನವೇಕೆ ಹರಿಯುತ್ತಿಲ್ಲ ? ಈ ಸನ್ನಿವೇಶಗಳಿಗೆಲ್ಲಾ ಈ ಹಿಂದೂಗಳು ಕೇವಲ ಅವನವನ ಆಕಸ್ಮಿಕ ಹುಟ್ಟುವಿಕೆಯನ್ನು ಮುಖ್ಯ ಮೂಲಮಾಪನವನ್ನಾಗಿಸಿರುವರೇಕೆ ? ಇದು ಆಯ ತಪ್ಪಿರುವ ಮೂಲಮಾಪನವೆಂದು ಸಕಾರಣವಾಗಿ ವಿವರಿಸಿದಾಗ, ಆ ಭಾವನೆಯು ತಪ್ಪೆಂದು ಶೃತಪಡಿಸಿದಾಗ ತಾವು ಬರೆದ ಅಥವಾ ಕೇಳಿ ಓದಿದ ಕೃತಿಗಳನ್ನೋ ಮಾಡಿದ ಭಾಷಣಗಳನ್ನೋ ಉದ್ಧರಿಸಿ, ಆ ಮೂಲಕ ರಕ್ಷಣೆ ಪಡೆಯುವ ಚತುರರಾಗಿದ್ದಾರೆ. ಇಂತಹವರಿಗೆ ಈ ಜಾತಿ, ವರ್ಗ, ಅಥವಾ ಜನ್ಮಾಂತರಗಳ ನಿರ್ಮೂಲನ ಕಾರ್ಯ ಕ್ರಮಗಳನ್ನು ಯಶಸ್ವಿಗೊಳಿಸಬೇಕೆಂಬ ಸನ್ನಿವೇಶಗಳೊದಗಿದಾಗ, ಅವರು ತಟಸ್ಥರು ಇಲ್ಲವೇ ನಿರಾಸಕ್ತಿ ತೋರಿಸಿ ಮೌನಿಗಳಾಗುವರು. ಹೀಗೆ ಮಾನವನು ಹುಟ್ಟುವ ಸ್ಥಾನಮಾನ ಪರಿಸರಗಳು ಮಾತ್ರವೇ ಅವನ ಶ್ರೇಷ್ಠತೆಯನ್ನು ಕಾಪಾಡಬಲ್ಲವೆಂಬ ಅವೈಜ್ಞಾನಿಕ ಧೋರಣೆಗೆ ದಾಸರಾಗಿರುವವರೇ ಮಿತಿಮೀರುತ್ತಿದ್ದಾರೆ. ಇವರ ಆತ್ಮವಂಚನೆ ಮೇರೆ ಮೀರಿದೆ,

ಪ್ರತಿ ಮಾನವನ ಆತ್ಮಗೌರವವನ್ನು ರಕ್ಷಿಸಬೇಕಾದುದು ಸುಸಂಸ್ಕೃತಿಯ ಮತ್ತು ಸುಸಂಸ್ಕೃತರ ಆದ್ಯ ಕರ್ತವ್ಯ ; ಗುರುತರ ಜವಾಬ್ದಾರಿಯೂ ಹೌದು. ಇದು ಅನಿವಾರ್ಯವೂ ಆಗಿದೆ. ಮಾನವೀಯತೆ ಲಕ್ಷಣಗಳನ್ನು ಪಡೆಯಲು ಈ ಸುಸಂಸ್ಕೃತರೆನ್ನಿಸಿಕೊಂಡಿರುವ ಈ ಹಿಂದೂಗಳ ಹೃದಯ ಪರಿವರ್ತನೆಯು ಅತ್ಯವಶ್ಯಕವಲ್ಲವೇ ? ಈ ಸಕಾರಣ ಪರಿವರ್ತನೆಯು ಸರ್ವ ಹಿಂದೂಗಳ ಹಿತರಕ್ಷಣೆಯನ್ನು ಶ್ರೇಯಸ್ಸನ್ನೂ ಮತ್ತು ವಿಶ್ವದಲ್ಲಿ ಮಹೋನ್ನತ ಸ್ಥಾನವನ್ನೂ ಗಳಿಸಿ ಚಿರಕಾಲ ಬಾಳಿ ಬೆಳಗಿಸಲು ನೆರವು ನೀಡಬಹುದಲ್ಲವೇ ? ಅಂತಹ ಪ್ರಯತ್ನ ನಡೆದು, ಅಮಾನವೀಯತೆಯ ಆಚರಣೆಗಳನ್ನು ತೊಲಗಿಸಿ, ಇಡೀ ಮಾನವ ಸಮೂಹಕ್ಕೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುವ ಮಹಾತಾರ್ಯ ಈ ಹಿಂದೂಗಳಿಂದ ನಡೆಯುತ್ತದೆ ಎಂದು ನಿರೀಕ್ಷಿಸುವುದು ಸಾಧುವೆನಿಸುವುದೆ ?

ಕಂಟದ/ಕಾಫಿ ಲೋಟದ ಪಾಯಸ : ಅಸ್ಪೃಶ್ಯತೆಯ ಮುಖಗಳು

ಚುಂಚನಹಳ್ಳಿಯು ನಂಜನಗೂಡು ತಾಲ್ಲೂಕಿನ ಒಂದು ಚಿಕ್ಕಗ್ರಾಮ. ಇಲ್ಲಿ ಸುಮಾರು 200 ಕುಳ ಲಿಂಗಾಯಿತರು, ಸುಮಾರು 70 ಕುಳ ದಲಿತರು, ಮತ್ತು ಇತರ ಸಣ್ಣಪುಟ್ಟ ಜಾತಿಗಳು ಸುಮಾರು 30 ಕುಳ ಇವೆ. ಹೀಗಿದ್ದು ಈ ಊರಿನಲ್ಲಿ ಕೋಮು ಸೌಹಾರ್ದವಿದೆ. ಜಾತಿಜಗಳಗಳು ನಡದ ಉದಾಹರಣೆಯಿಲ್ಲ. ಊರಿನ ಅಸ್ಪೃಶ್ಯರು ಮತ್ತು ಲಿಂಗಾಯಿತರು ಅಣ್ಣತಮ್ಮಂದಿರಂತೆ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುತ್ತಿದ್ದಾರೆ.

ಇದೇ ಗ್ರಾಮದಲ್ಲಿ ಶಿವರಾಜಪ್ಪ ಮತ್ತು ವೀರಭದ್ರಪ್ಪನೆಂಬ ಜಾತಿವಾದಿ ಲಿಂಗಾಯಿತರು ಇದ್ದಾರೆ.ದಲಿತರನ್ನು ಕಂಡರೆ ವಿಷಕಾರುವ ಈ ಮನುಷ್ಯ ತನ್ನ ಇಡೀ ಜೀವನದಲ್ಲಿ ಯಾವುದೇ ಒಳ್ಳೆಯ ಕೆಲಸವನ್ನು ಮಾಡಿಲ್ಲ. ದಲಿತರು ತಮ್ಮ ಸೈಟಿಗೆ ಬೇಲಿ ಹಾಕಿರುವುದು ಇವರಿಗೆ ಸಹಿಸಲಾರದ ವಿಚಾರವಾಗಿದೆ. ಇವರು ತಮ್ಮ ಕೋಮಿನ ತಮ್ಮಷ್ಟೇ ಜಾತಿವಾದಿಯಾದ ಪುಟ್ಟಲಿಂಗಯ್ಯ ಎಂಬ ತಾಸೀಲ್ದಾರರನ್ನು ದಲಿತರ ವಿರುದ್ಧ ಛೂ ಬಿಟ್ಟಿರುತ್ತಾರೆ.

12.3.84ರಲ್ಲಿ ಬೆಳಗಿನ ಹನ್ನೊಂದು ಗಂಟೆಯಲ್ಲಿ ಮಾರಿಯಂತೆ ಊರು ಹೊಕ್ಕ ತಾಸೀಲ್ದಾರರು ಮಧ್ಯಾಹ್ನ ಮೂರುಗಂಟೆಯ ತನಕ ಶಿವರಾಜಪ್ಪನ ಮನೆಯಲ್ಲಿದ್ದು ಹೊರಬಿದ್ದರು. ನಂತರ ಅನ್ನ ಹಾಕಿದ ದಣಿಯ ಋಣ ತೀರಿಸಲು ದಲಿತರನ್ನು ಬಾಯಿಗೆ ಬಂದಂತೆ ಬೈದು ಅಸ್ಪೃಶ್ಯತೆ ಆಚರಿಸಿರುವರು. ಹರಿಜನರ ಪೈಕಿ ಕೆಲವರು ಇದ್ದಾರೆ. ಅವರು ಎಂತಹವರೆಂದರೆ ಶಿವರಾಜಪ್ಪನಂಥ ಜಾತಿವಾದಿಯು ಕೊಟ್ಟಿಗೆಯಲ್ಲಿ ಕೂರಿಸಿ ತೆಂಗಿನ ಕಾಯಿ ಕಂಟದಲ್ಲಿ ಕೊಟ್ಟು ಕಾಫಿಯನ್ನು ಕುಡಿದು ತನ್ನ ಜನರಿಗೇ ದ್ರೋಹ ಬಗೆಯುವ ಪ್ರವೃತ್ತಿಯವರು ಆದರೆ ನಮ್ಮ ತಾಸೀಲ್ದಾರ್ ಸಾಹೇಬರು ಶಿವರಾಜಪ್ಪನ ಮನೆಯ ಊಟದ ನಂತರ ನಡುಮನೆಯಲ್ಲಿ ಕುಂತು ಒಂದು ಲೋಟ ಪಾಯಸ ಕುಡಿದು ಈ ಎಲ್ಲಾ ಕೊಳಕು ರಾಜಕೀಯ ಮಾಡಿದ್ದಾರೆ. ಕಂಟದ ಕಾಫಿಯ ಹರಿಜನರಿಗೂ, ಲೋಟದ ಪಾಯಸದ ಸಾಹೇಬರಿಗೂ ಇರುವ ವ್ಯತ್ಯಾಸ ಏನೆಂಬುದೇ ಇನ್ನೂ ನಮಗೆ ಅರ್ಥವಾಗಿಲ್ಲ.

ಮೇಲ್ಕಂಡ ಸೈಟುಮಾಳವು 1947ರಷ್ಟು ಹಿಂದೆಯೇ ಸರ್ಕಾರದಿಂದ ಕೊಂಡುಕೊಂಡ ಭೂಮಿಯಾಗಿದ್ದು ಸರ್ವೆನಂಬರ್ 446-1 ಮತ್ತು 446-2 ರಲ್ಲಿ ಎರಡು ಎಕರೆ ಮೂವತ್ತು ಗುಂಟೆ ಜಾಗವಿದೆ. ಇದೇ ಸೈಟಿನ ಮೇಲೆ ಶಿವರಾಜಪ್ಪನು ತನ್ನ ಸ್ವಂತ ಉಪಯೋಗಕ್ಕಾಗಿ ರಸ್ತೆ ಮಾಡಲು ಯತ್ನಿಸಿದ್ದನ್ನು ದಲಿತರು ಬೇಲಿ ಹಾಕುವ ಮೂಲಕ ಪ್ರತಿಭಟಿಸಿರುವರು. ಅಲ್ಲದೆ ತಾನು ನೇರವಾಗಿ ರಸ್ತೆವ್ಯವಹಾರಕ್ಕೆ ಳಿಯಲು ಹೆದರಿಕೊಂಡು ಇದೇ ಗ್ರಾಮದ ಉನ್ನತ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ವಿ. ರಾಮು ಎಂಬುವರನ್ನು ಜೂಜಿನ ದಾಳದಂತೆ ಬಳಸಿರುವನು.

ಇಂಥ ನೀಚ ರಾಜಕೀಯದ ಈ ವ್ಯಕ್ತಿಯನ್ನು ಹಾಗೂ ಈತನ ಜಾತಿವಾದಿ ಸ್ನೇಹಿತರನ್ನು ನಂಜನಗೂಡು ತಾಲ್ಲೂಕು ದ.ಸಂ.ಸ. ಉಗ್ರವಾಗಿ ಖಂಡಿಸಿದೆ. ಮತ್ತು ಅಸ್ಪೃಶ್ಯತೆ ಆಚರಿಸಿರುವ ತಾಸೀಲ್ದಾರರನ್ನು ಕೂಡಲೇ ಸಸ್ಪೆಂಡ್ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ ದಿನಾಂಕ 23-3-84 ರಂದು ದ.ಸಂ. ಸ. ತಾಲ್ಲೂಕು ಶಾಖೆಯು ಎ.ಸಿ. ಆಫೀಸಿನ ಆವರಣದಲ್ಲಿ ಒಂದು ದಿನದ ಸಾಂಕೇತಿಕ ಧರಣಿ ನಡೆಸಲಾಗಿದೆ. ಧರಣಿ ಸಂದರ್ಭದಲ್ಲಿ ತಾಸೀಲ್ದಾರರು ರಜಹಾಕಿ ಅವಿತುಕೊಂಡಿದ್ದರು.

—ಮುಳ್ಳೂರು ನಾಗರಾಜು

ಭೂ ನ್ಯಾಯ ಮಂಡಲಿಗಳ ಅಂತರಂಗ ಬಹಿರಂಗ

ಭೂ ನ್ಯಾಯ ಮಂಡಳಿಗಳು ಹುಟ್ಟಿಕೊಂಡಿದ್ದು ಒಂದನೇ ಆ್ಯಕ್ಟಿನ ಸಂಬಂಧವಾಗಿ. ಇದು ಜಾರಿಗೆ ಬಂದಿದ್ದು 01-03-1974ರಲ್ಲಿ. 74ರ ಈ ತಿದ್ದುಪಡಿ ಕಾಯಿದೆ 1962ರ ಕಾನೂನಿಗಿಂತ ಸಾಕಷ್ಟು ಭಿನ್ನವಾಗಿದ್ದು ಇದೇ ಒಂದು ಹೊಸ ಕಾನೂನು ಅನ್ನುವಂತೆ ರೂಪುಗೊಂಡಿತು.

ಈ ಭೂ ನ್ಯಾಯ ಮಂಡಲಿಗಳು ಮುಖ್ಯವಾಗಿ ನಿರ್ವಹಿಸ ಬೇಕಿದ್ದ ಕೆಲಸಗಳು ಎರಡು. ಮೊದಲನೆಯದಾಗಿ ಯಾವುದೇ ಭೂಮಿ ಕಾನೂನು ಪ್ರಕಾರ ಗೇಣಿಯ ಜಮೀನಾಗಿದ್ದರೆ ಅದನ್ನು ಗುರ್ತಿಸಿ ಸರ್ಕಾರದ ಸುಪರ್ತಿಗೆ ಪಡೆದು ಕೊಳ್ಳುವುದು ನಂತರ ಗೇಣಿದಾರನಿಗೆ ಆ ಜಮೀನಿನ ಒಡೆತನದ ಹಕ್ಕನ್ನು ದೊರಕಿಸಿ ಕೊಡುವುದು. ಎರಡನೆಯದಾಗಿ ಭೂಮಿಗೆ ಸಂಬಂಧಪಟ್ಟು ಹೆಚ್ಚಿನ ಭೂಮಿ ಹೊಂದಿರುವ ಭೂ ಮಾಲಿಕರು ಸಲ್ಲಿಸಿರುವ ವಿವರಗಳ ಆಧಾರದ ಮೇಲೆ ಕಾನೂನು ಪ್ರಕಾರ ಅವನಿಗೆ ಸೇರ ಬೇಕಾದಷ್ಟನ್ನು ನಿಗದಿ ಪಡಿಸಿ ಹೆಚ್ಚುವರಿ ಭೂಮಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದು.

ಟ್ರಿಬ್ಯುನಲ್‌ಗಳ ತೀರ್ಮಾನವನ್ನು ಯಾವುದೇ ಕೋರ್ಟಿನಲ್ಲೂ ಪ್ರಶ್ನಿಸುವಂತಿಲ್ಲ. ಮತ್ತೆ ಯಾವುದೇ ದೊಡ್ಡ ಹುದ್ದೆಯ ಅಧಿಕಾರಿಯ ಒಪ್ಪಿಗೆಯೂ ಇದಕ್ಕೆ ಬೇಕಾಗಿಲ್ಲ. ಆದರೆ ಈ ತೀರ್ಮಾನ ಒಪ್ಪಿಗೆಯಾಗದಲ್ಲಿ 226ನೇ ಸೆಕ್ಷನ್ ಮೇರೆಗೆ ಹೈಕೋರ್ಟಿನಲ್ಲಿ ರಿಟ್ ಹಾಕಬಹುದು. ಈ ಹಿಂದೆ ಅಂದರೆ 1962ರ ಕಾನೂನಿನಲ್ಲಿ ನ್ಯಾಯಾಂಗದ ಅಧಿಕಾರಿಗಳೇ ಭೂ ನ್ಯಾಯ ಮಂಡಳಿಯನ್ನು ನಡೆಸುತ್ತಿದ್ದರು. ಇಲ್ಲಿ ಇದಕ್ಕಿಂತ ಉನ್ನತ ನ್ಯಾಯಾಂಗ ಅಥವಾ ಅಧಿಕಾರಿಗಳ ಮುಂದೆ ತನಿಖೆಗೆ ಬೇಕಾದರೆ 3-4 ಬಾರಿ ಅಪೀಲು ಮಾಡಿಕೊಳ್ಳುವ ಸಾಧ್ಯತೆ ಇತ್ತು. ಸರ್ಕಾರ ಇಚ್ಛಿಸಿದಲ್ಲಿ ಇದನ್ನೆಲ್ಲಾ ಪರಿಶೀಲಿಸಿ ಬೇರೆಯದೇ ತೀರ್ಮಾನವನ್ನು ಕೊಡುವ ಸಾಧ್ಯತೆ ಇತ್ತು. 74ರ ತಿದ್ದುಪಡಿ ಕಾಯಿದೆ ಭೂ ನ್ಯಾಯ ಮಂಡಳಿಗಳ ತೀರ್ಮಾನವನ್ನೇ ಕಟ್ಟಕಡೆಯ ತೀರ್ಮಾನವಾಗುವಂತೆ ಸಂಪೂರ್ಣ ಅಧಿಕಾರ ನೀಡಲಾಯಿತು. ಇಲ್ಲಿ ಟ್ರಿಬುನಲ್ ಸದಸ್ಯರು ಪ್ರಾಮಾಣಿಕವಾಗಿ ಸಹಜವಾದ ರೀತಿಯಲ್ಲಿ ತೀರ್ಮಾನ ಮಾಡುವುದು ಬಹಳ ಅಗತ್ಯ.ಕಾನೂನು ತೀರ್ಮಾನದ ಮಾಧ್ಯಮ ಆಗುವುದಕ್ಕಿಂತ ಹೆಚ್ಚಾಗಿ ಯಾವುದೇ ವಿಧಗಳನ್ನು ಬಳಸಿ ಸತ್ಯವನ್ನು ಹೊರಕ್ಕೆಳೆದು ತೀರ್ಪು ನೀಡುವುದು ಮುಖ್ಯ ಗುರಿಯಾಗ ಬೇಕಿತ್ತು. ಆದರೆ ಎಷ್ಟು ಟ್ರಿಬ್ಯೂನಲ್‌ಗಳು ಈ ದಿಕ್ಕಿನಲ್ಲಿ ಕೆಲಸ ಮಾಡಿವೆ ?

ಸರ್ಕಾರದ ಪ್ರಯತ್ನ ಮತ್ತು ವಿಫಲತೆ

ಕರ್ನಾಟಕ ಸರ್ಕಾರವು ಭೂ ಸುಧಾರಣೆಯ 1974ರ ತಿದ್ದುಪಡಿ ಮಾಡಿದ ಸಂದರ್ಭದಲ್ಲಿ ಆಡಳಿತದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಪ್ರಯತ್ನಿಸಿತು. ಇದಕ್ಕಾಗಿ ಕೆಲವು ಸೂಪರ್‌ವೈಸರ್‌ಗಳು ಹಾಗೂ ಫೀಲ್ಡ್ ಆಫೀಸರ್‌ಗಳಿಗೆ ವರ್ಕ್‌ಷಾಪ್‌ಗಳನ್ನು ನಡೆಸಿತು. ಫೀಲ್ಡ್ ಆಫೀಸರುಗಳಿಗೆ ಭೂಮಿತಿಗಿಂತ ಹೆಚ್ಚಿನ ಭೂಮಿ ಇಟ್ಟುಕೊಂಡ ಭೂ ಮಾಲಿಕರ ಒಂದು ಪಟ್ಟಿಯನ್ನು ತಯಾರು ಮಾಡುವಂತೆ ಆದೇಶ ನೀಡಿತು. ಈ ಮಾಹಿತಿಯ ಆಧಾರದ ಮೇಲೆ ಹೆಚ್ಚಿನ ಆಸ್ತಿ ಇಟ್ಟು ಕೊಂಡಿದ್ದೂ ಡಿಕ್ಲರೇಷನ್

ಭೂ ಸುಧಾರಣ ಚರಿತ್ರೆ

● ಕ್ಷೀರ ಸಾಗರ

ಅರ್ಜಿ ಸಲ್ಲಿಸದ ಭೂ ಮಾಲಿಕರ ಮೇಲೆ ಕ್ರಮ ಕೈಗೊಳ್ಳುವ ಮತ್ತು ಅವರ ಮೇಲೆ ಒತ್ತಡ ಹೇರುವ ಉದ್ದೇಶ ಸರ್ಕಾರಕ್ಕಿತ್ತು. ಪ್ರತಿಯೊಂದು ಕೇಸಿನಲ್ಲೂ ವಿವರಗಳನ್ನೊಳಗೊಂಡಂತಹ ವಿಷಯ ಸಂಗ್ರಹಣೆಗೆ ಬೇಕಾದ ಹಂತ ಹಂತವಾದ ವಿವರಗಳನ್ನು ಪಡೆಯಲು ಫ್ಲೋಚಾರ್ಟ್ಸನ್ನು ತಯಾರು ಮಾಡಲಾಯಿತು. ಇದು ಗೇಣಿ ವಿಮುಕ್ತಿ ಹಾಗೂ ಭೂಮಿತಿಗಳ ಬಗೆಗೆ ವಿವರಗಳನ್ನೊಳಗೊಂಡಿತ್ತು. ಫೀಲ್ಡ್ ಏಜೆನ್ಸಿಗಳು ಸಂಗ್ರಹಿಸಿದ ಮಾಹಿತಿಯನ್ನು ತಿಂಗಳಿಗೊಮ್ಮೆ ಸೂಪರ್‌ವೈಸರ್‌ಗಳು ಪರಿಶೀಲಿಸುತ್ತಿದ್ದರು. 1

ಇದರ ಆಧಾರದ ಮೇಲೆ ತಹಶಿಲ್ದಾರರು ಅರ್ಜಿಸಲ್ಲಿಸದ ಭೂ ಮಾಲಿಕರು ಮತ್ತು ಗೇಣಿದಾರರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಇಂಥ ಪ್ರಯತ್ನಗಳನ್ನು ಮಾಡದೆ ತಹಶಿಲ್ದಾರರುಗಳು ಕೈಚೆಲ್ಲಿ ಕುಳಿತರು. ಭೂಮಿತಿಗಿಂತ ಜಾಸ್ತಿ ಭೂಮಿ ಇಟ್ಟು ಕೊಂಡ ಭೂ ಮಾಲಿಕರು ಎಷ್ಟು ಮಂದಿ ಇದ್ದಾರೆ? ಯಾರು ಯಾರು? ಅನ್ನುವುದರ ಬಗ್ಗೆ ಫೀಲ್ಡ್ ಆಫೀಸರುಗಳು ಸಂಗ್ರಹಿಸಿದ ಮಾಹಿತಿಯ ಉಪಯೋಗ ಪಡೆಯದೆ ತಟಸ್ಥರಾದರು. ಅರ್ಜಿ ಸಲ್ಲಿಸದ ಭೂ ಮಾಲೀಕರ ವಿರುದ್ಧ ದಂಡನೆಯ ಕಾನೂನಿದ್ದರೂ ಅದನ್ನು ಚಲಾವಣೆಗೆ ತರದೆ ಮಗುಂ ಆದದ್ದು ಒಂದು ವಿಪರ್ಯಾಸ.

ಭೂ ನ್ಯಾಯ ಮಂಡಲಿಯಲ್ಲಿರುವ ಸದಸ್ಯರನು ಎರಡು ಗುಂಪುಗಳಾಗಿ ವಿಂಗಡಿಸಬಹುದು :

1. ಆಡಳಿತ ಪಕ್ಷದ ಸದಸ್ಯರೇ ಸಾಮಾನ್ಯವಾಗಿ ಇಲ್ಲಿಯೂ ಸದಸ್ಯರಾಗಿರುತ್ತಾರೆ.
2. ಅಧಿಕಾರಿ ಶಾಹಿಗಳು.

ಈ ಎರಡೂ ವಿಧವಾದ ಜಂಟಿ ಗುಂಪಿನ ಸದಸ್ಯರಿಂದ ಭೂ ನ್ಯಾಯ ಮಂಡಳಿಗಳು ರಚಿತವಾಗಿದ್ದರೂ ಇದಕ್ಕೆ ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರ ಶಾಹಿ ಸಂಪೂರ್ಣವಾಗಿ ನಿಸ್ಸಹಾಯಕವಾಗ ಬೇಕಾಯಿತು. ಯಾಕೆಂದರೆ ಆಡಳಿತದಲ್ಲಿರುವ ಪಕ್ಷವೇ ಸದಸ್ಯರ ನೇಮಕಾತಿ ಮಾಡಿ ಆಡಳಿತ ಸರ್ಕಾರದ ಹುಕುಂ ಪಡೆದುಕೊಳ್ಳುತ್ತದೆ. ಭೂ ನ್ಯಾಯ ಮಂಡಳಿಗಳನ್ನು ಕಾನೂನು ಬದ್ಧವಾಗಿ ಸ್ಥಾಪಿಸುವ ಆಜ್ಞೆ 1-3-1974ರಲ್ಲೇ ಬಂದರೂ ಕೂಡ ಅವುಗಳ ನಿಜವಾದ ಪ್ರಾರಂಭ ಆದದ್ದು 1975ರ ಮಾರ್ಚ್ ತಿಂಗಳಿನಲ್ಲಿ.

1974ರ ಕಾನೂನು ಪ್ರಕಾರ ಅಡ್ಮಿನಿಸ್ಟ್ರೇಟಿವ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಮೈಸೂರಿನಲ್ಲಿ ಈ ಸಂಬಂಧಪಟ್ಟ ಆಫೀಸರುಗಳಿಗೆ ತರಬೇತಿ ಕೊಡಲಾಯಿತು. ಆದರೆ ಸರ್ಕಾರಿ ಅಧಿಕಾರಿಗಳಲ್ಲದೆ ಸ್ಥಳೀಯ ಸದಸ್ಯರಿಗೆ ಇಂಥ ಯಾವುದೇ ತರಬೇತಿ ಕೊಡಲಿಲ್ಲ. ಈ ಬಗ್ಗೆ ಹಲವಾರು ಬಗೆಯ ಪ್ರಶ್ನೆಗಳೆದ್ದವು. ಆಗಸ್ಟ್ 29, 1974ರಲ್ಲಿ ನ್ಯಾಯಾಂಗದಲ್ಲಿ ನಡೆದ ಚರ್ಚೆಗಳಲ್ಲಿ ಬಿ. ಬಿ. ಸಾಯನಕರು, 'ಸರ್ಕಾರವು ನೇಮಿಸಿರುವ ಬಹಳಷ್ಟು ಭೂ ನ್ಯಾಯ ಮಂಡಳಿಯ ಸದಸ್ಯರಿಗೆ ಕಾನೂನಿನ ಎ ಬಿ ಸಿ ಡಿ ಗೊತ್ತಿಲ್ಲ. ಇಂಥವರು ಗೇಣಿದಾರರಿಗೆ ಎಂತಹ ನ್ಯಾಯ ದೊರಕಿಸಿ ಕೊಡುತ್ತಾರೋ ಗೊತ್ತಿಲ್ಲ' ಅಂತ ಅನುಮಾನಪಟ್ಟದ್ದು ಬಹಳ ನಿಜ ಎನಿಸ್ತುದೆ.

ಎಂ.ಎ.ಎಸ್.ರಾಜನ್ ಅವರು ಹೇಳುವಂತೆ 'ಭೂ ನ್ಯಾಯ ಮಂಡಳಿಗಳ ಬಗ್ಗೆ ಇರುವ ಒಂದು ಸಾಮಾನ್ಯ ಅಪವಾದವೆಂದರೆ ಈ ಸದಸ್ಯರಿಗೆ ಕಾನೂನಿನ ಹಾಗೂ ನ್ಯಾಯಾಂಗದ ಪರಿಚಯವಿಲ್ಲ. ಆದ್ದರಿಂದ ಇವರ ಮುಂದೆ ಬರುವ ಕೇಸುಗಳನ್ನು ತೀರ್ಮಾನ ಮಾಡುವ ಮಟ್ಟದಲ್ಲಿ ಇವರಿರುವುದಿಲ್ಲ ಇಂತಹ ಅಪಾಯವನ್ನು ತಡೆಗಟ್ಟುವುದಕ್ಕಾಗಿಯೇ ಇರಬೇಕು, 1962ರ ಜತ್ತಿ ಕಮಿಟಿ ಪ್ರಾಥಮಿಕ ಭೂ ನ್ಯಾಯ ಮಂಡಳಿಗಳನ್ನು ಪರಿಶೀಲಿಸಿತು. ಅನುಭವವಿರುವ, ನುರಿತ ಕಾನೂನು ಬಲ್ಲ ವ್ಯಕ್ತಿ

ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರರಿಗೆ ಸಹಾಯ ಸೌಲಭ್ಯಗಳು

ನಮ್ಮ ನಾಡಿನ ಅರ್ಥವ್ಯವಸ್ಥೆಯಲ್ಲಿ ಕೃಷಿಯ ನಂತರ ನೇಕಾರಿಕೆಗೆ ವಿಶೇಷ ಸ್ಥಾನ. ನಿರುದ್ಯೋಗ ನಿವಾರಣೆಯಲ್ಲಿ ಅದರ ಪಾತ್ರ ಗಣನೀಯ. ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರರ ಸ್ಥಿತಿಗತಿಗಳನ್ನು ಅರಿತ ಸರಕಾರ ಅವರ ಏಳಿಗೆಗೆ ನೆರವಾಗಿದೆ.

ಕೈಮಗ್ಗ ನೇಕಾರ ಸಂಘಗಳಿಗೆ ಷೇರುಧನ ಹಾಗೂ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ೫,೦೦೦ ರೂ. ಗಳಿಂದ ೫೦,೦೦೦ ರೂ. ವರೆಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ.

ನೇಯ್ಗೆ ಆಧುನೀಕರಣ ಯೋಜನೆಯನ್ವಯ ಸುಧಾರಿತ ಮಗ್ಗಗಳನ್ನು ಹಾಗೂ ಉಪಕರಣ ಗಳನ್ನು ಕೊಳ್ಳಲು ಶೇಕಡ ೭೫ ರಷ್ಟು ಆರ್ಥಿಕ ಸಹಾಯ ನೀಡಲಾಗುತ್ತಿದೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಅಪೆಕ್ಸ್ ಬ್ಯಾಂಕುಗಳ ಮೂಲಕ ರಿಯಾಯಿತಿ ಬಡ್ಡಿ ದರದಲ್ಲಿ ಸಹಾಯ ಧನ ನೀಡಲಾಗುತ್ತಿದೆ.

ಹತ್ತಿ, ಉಣ್ಣೆ ಮತ್ತು ರೇಷ್ಮೆ ನೇಕಾರ ಉದ್ಯಮಿಗಳಿಗೆ ನೇಕಾರ ಸಂಘಗಳಿದ್ದು ಅವು ನೇಯ್ಗೆ ವಸ್ತುಗಳ ಸಂಗ್ರಹಣೆ ಮತ್ತು ಮಾರಾಟ ವ್ಯವಸ್ಥೆ ಮಾಡುತ್ತಿವೆ.

ಪ್ರತಿ ಕೈಮಗ್ಗ ನೇಕಾರರ ಕ್ಷೇಮಕ್ಕಾಗಿ ಕೈಮಗ್ಗ ನಿಗಮವು ಹೆಚ್ಚಿನ ಅಭಿವೃದ್ಧಿ ಯೋಜನೆ ಕೈಗೊಂಡಿದೆ.

ಏಳನೇ ತರಗತಿಯವರೆಗೂ ಶಿಕ್ಷಣ ಪಡೆದಿರುವ ನೇಕಾರರಿಗೆ ನೇಯ್ಗೆ ಹಾಗೂ ವಿನ್ಯಾಸದಲ್ಲಿ ತರಬೇತಿ ನೀಡಲಾಗುವುದು. ತರಬೇತಿ ವೇಳೆಯಲ್ಲಿ ಪ್ರತಿ ತಿಂಗಳು ೨೦೦ ರೂ. ಶಿಷ್ಯ ವೇತನವನ್ನು ಕೊಡ ಲಾಗುತ್ತಿದೆ.

ಎಸ್.ಎಸ್.ಎಲ್.ಸಿ.ವರೆಗೆ ಅಭ್ಯಸಿಸಿರುವ ನೇಕಾರರಿಗೆ ವಿಶೇಷ ತಾಂತ್ರಿಕ ಜ್ಞಾನ ನೀಡಲು ಮೂರು ವರ್ಷಗಳ ತರಬೇತಿ ವ್ಯವಸ್ಥೆ ಮಾಡಲಾಗುತ್ತಿದೆ. ಈ ತರಬೇತಿ ಅವಧಿಯಲ್ಲಿ ಪ್ರಥಮ ವರ್ಷ ೧೫೦ ರೂ., ದ್ವಿತೀಯ ವರ್ಷ ೧೭೫ ರೂ. ಹಾಗೂ ತೃತೀಯ ವರ್ಷ ೨೦೦ ರೂ. ಮಾಸಿಕ ವೇತನ ನೀಡಲಾಗುತ್ತಿದೆ.

ಹರಿಜನ, ಗಿರಿಜನ ನೇಕಾರರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಹತ್ತಿ ಕೈಮಗ್ಗ ಅಭಿವೃದ್ಧಿಗಾಗಿ ೭ ಕೋಟಿ ರೂ. ವೆಚ್ಚದ ಮೂರು ಹೊಸ ಯೋಜನೆಗಳನ್ನು ಉಣ್ಣೆ ನೇಕಾರರ ಏಳಿಗೆಗಾಗಿ ೧.೫೦ ವೆಚ್ಚದ ತೀವ್ರ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ್, ತಾಲ್ಲೂಕು ಕೇಂದ್ರದಲ್ಲಿ ಕ್ಷೇತ್ರ ಅಭಿವೃದ್ಧಿ ಅಧಿಕಾರಿಗಳನ್ನು ಸಂಪರ್ಕಿಸಬೇಕು.

ಕೈಮಗ್ಗ ಅಥವಾ ವಿದ್ಯುತ್ ಚಾಲಿತ ಯಂತ್ರದಿಂದ ಬಟ್ಟೆಯನ್ನು ತಯಾರಿಸಿದ ನೇಕಾರರೇ ಸ್ವತಃ ಮಾರಾಟ ಮಾಡಬೇಕಾದಲ್ಲಿ, ಮೂಲತೆರಿಗೆ ಮತ್ತು ಸರ್‌ಚಾರ್ಜ್‌ಗಳಿಂದ ಪೂರ್ಣ ವಿನಾಯಿತಿ ಇದೆ.

ಪ್ರಕಟಣೆ :— ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ,
ಬೆಂಗಳೂರು.

ಯಿಂದ ಏಕ ಸದಸ್ಯ ಮಂಡಳಿಯಾಗಿ ರೂಪಿತಗೊಳ್ಳಬೇಕು ಅನ್ನುವ ಸಲಹೆಯನ್ನು ಅದು ಕೊಟ್ಟಿತು. ಈ ಭಾವನೆಯ ವಿಸ್ತರಣೆಯೇ ಈಗಿನ ಟ್ರಿಬ್ಯುನಲ್‌ಗಳು ಅನ್ನುವ ವಾದ ಕೂಡ ಇದೆ. ಕಾನೂನಿನ ಅರಿವೇ ಇಲ್ಲದ ಸಾಮಾನ್ಯ ಜನರನ್ನು ತೀರ್ಮಾನಗಳನ್ನು ಕೊಡುವ ಹಕ್ಕುಳ್ಳ ಸದಸ್ಯರನ್ನಾಗಿ ಮಾಡಿದ್ದು ಭಾರತದ ಮೂಲಭೂತ ಶಾಸನಕ್ಕೆ ಧಕ್ಕೆ ತರುವಂತಹದು' ಅನ್ನುವ ವಾದವನ್ನು ಮಂಡಿಸಿ ಹೈಕೋರ್ಟಿನಲ್ಲಿ ವಾದಿಸಲಾಯಿತು. ಹೈಕೋರ್ಟು ಈ ವಾದವನ್ನು ತಳ್ಳಿ ಹಾಕಿತು. 3 ಅದು ಮುಂದಿಟ್ಟ ವಾದವೆಂದರೆ ಕಂದಾಯ ತೆರಿಗೆ ಮುಂತಾದ ವಿಷಯಗಳ ಬಗ್ಗೆ ಇತರ ಮಂಡಳಿಗಳು ತೀರ್ಮಾನ ಕೊಡುವುದು ನ್ಯಾಯಾಧೀಶರಲ್ಲದ ಸಾಮಾನ್ಯ ವ್ಯಕ್ತಿಯೇ ತೀರ್ಮಾನ ಕೊಡುವವನಾಗಿರಬಹುದು. ಆದ್ದರಿಂದ ಭೂ ವಿವಾದ ತೆರಿಗೆ ವಿಭಾಗಗಳು ನ್ಯಾಯಾಂಗದ ಅವಿಭಾಜ್ಯ ಅಂಗವೇನಲ್ಲ ಅನ್ನುವ ತೀರ್ಮಾನವನ್ನು ಕೊಟ್ಟಿತು. 4

ಭೂ ಸಂಬಂಧಗಳಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ತರಲು ಸುಧಾರಣೆಗಳ ಮೂಲಕ ಸಾಧ್ಯವಿಲ್ಲ. ಜನ ಸಂಘಟಿತರಾಗಿ ಸಶಸ್ತ್ರ ಕ್ರಾಂತಿಯ ಮೂಲಕ ಭೂ ಆಕ್ರಮಣ ಚಳುವಳಿಗಳನ್ನು ನಡೆಸಿದಾಗ ಮಾತ್ರ ಭೂಮಿಯ ಮೇಲೆ ಶ್ರಮ ಹಾಕಿದ ಜನ ಬಂದ ಉತ್ಪತ್ತಿಯನ್ನು ಅವರೇ ಪಡೆದುಕೊಳ್ಳಲು ಸಾಧ್ಯ ಎನ್ನುವ ವಾದ ಒಂದು ಕಡೆ ಆದರೆ, ಇನ್ನೊಂದು ಕಡೆ ಈಗ ಇರುವ ಸಾಮಾಜಿಕ ವ್ಯವಸ್ಥೆಯೊಳಗೆ ಅಂಥದೇ ಉದ್ದೇಶಿತ ಬದಲಾವಣೆಗಳನ್ನು ತರಲು ಸಾಧ್ಯ ಅನ್ನುವ ವಾದವೂ ಇದೆ. ಈ ವಾದ ಈಗಿನ ಪ್ರಸ್ತುತ ಸರ್ಕಾರದ್ದು. ಆದರೆ ಈ ಉದ್ದೇಶದ ಕಾರ್ಯರೂಪಕ್ಕೆ ವಾಹಕಗಳಾದ ಭೂ ನ್ಯಾಯ ಮಂಡಳಿಗಳು ಮತ್ತು ಅದರ ಸದಸ್ಯರು ಈ ಸಮಾಜದ ವಿಷ ಬೀಜಗಳಾಗಿದ್ದರೆ ಬರುವ ಫಸಲು ಸಂಜೀವಿನಿಯಾಗಲು ಸಾಧ್ಯವಾ ? ಅನ್ನುವ ಪ್ರಶ್ನೆ ಉದ್ಭವಿಸುತ್ತದೆ. ಪರಿಸ್ಥಿತಿ ಹಾಗೂ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಗಮನಿಸದೆ ಎಲ್ಲವನ್ನೂ ತಮ್ಮ ಹಿತಾಸಕ್ತಿಗಳಿಗೆ ಬಳಸಿಕೊಳ್ಳುವ ಟ್ರಿಬ್ಯುನಲ್ ಸದಸ್ಯರೂ ಹಾಗೂ ಸೂಕ್ಷ್ಮ ವೈರುಧ್ಯಗಳನ್ನು ಗಮನಿಸದೆ ಸಾಮಾನ್ಯೀಕರಿಸಿದ ಕಾನೂನುಗಳೂ ದುಡಿಯುವವರ ನಾಡಿಯ ಮಿಡಿತವನ್ನು ಎಷ್ಟರ ಮಟ್ಟಿಗೆ ಗುರುತಿಸಬಲ್ಲದು ಅನ್ನುವ ಪ್ರಶ್ನೆ ಏಳುವುದು ಸಹಜ.

ತೀರಾ ಸಂಕೀರ್ಣವಾಗಿರುವ ಭೂ ಸುಧಾರಣ ಕಾನೂನು ಹೆಚ್ಚಿನ ಗೊಂದಲಗಳಿಗೆ ಎಡೆ ಮಾಡಿಕೊಡುವ ಸಾಧ್ಯತೆ ಇದೆ. ಆದಕ್ಕಾಗಿ ಭೂ ನ್ಯಾಯ ಮಂಡಳಿ ಕಾನೂನನ್ನು ಸರಳಗೊಳಿಸಿ ಗೇಣಿದಾರರಿಗೆ ಅವರ ಪರಿಸ್ಥಿತಿಯ ಆಧಾರದ ಮೇಲೆ ನ್ಯಾಯ ದೊರಕಿಸಿ ಕೊಡುವ ಪ್ರಾಮಾಣಿಕ ಪ್ರಯತ್ನ ಎಂದು ಹೇಳುವವರೂ ಇದ್ದಾರೆ. ಆದರೆ ಕಾನೂನುಗಳು ಎಷ್ಟೇ ಸರಳ ಅಥವಾ ಸಂಕೀರ್ಣವಾಗಿದ್ದರೂ ಭೂ ಮಾಲೀಕರ ದಬ್ಬಾಳಿಕೆ ಅತಿಯಾಗಿದ್ದಾಗ ಗೇಣಿದಾರ ಭೂ ಮಾಲೀಕನ ಬಂದೂಕಿನ ತುದಿಗೆ ಎದೆ ಒಡ್ಡಿಕೊಂಡಿದ್ದಾಗ ಈ ಕಾನೂನುಗಳೊಳಗೆ ಅವನು ಪ್ರವೇಶ ಮಾಡಲು ಸಾಧ್ಯವೇ ಆಗುವುದಿಲ್ಲ.

ಗೇಣಿದಾರರಿಗೆ ಭೂಮಾಲೀಕರ ತಡೆ

ಹಳ್ಳಿಗಳ ಕಡೆ ಸಾಮಾನ್ಯ ರೈತರೂ ಕೂಡ ಗೇಣಿದಾರ ಡಿಕ್ಲೇರೇಷನ್ ಕೊಡುವುದು ತಪ್ಪು ಅನ್ನುವ ಕಲ್ಪನೆಯಲ್ಲಿರುತ್ತಾರೆ. ಯಾಕೆಂದರೆ ಇದು ಸ್ವಾಮಿದ್ರೋಹ, ಉಂಡವರ ಮನೆಗೆ ಎರಡು ಬಗೆಯುವುದು ಅನ್ನುವ ಅಭಿಪ್ರಾಯ ದಟ್ಟವಾಗಿದೆ. ಉದಾಹರಣೆಗೆ ಮೈಸೂರಿನಿಂದ 6 ಮೈಲಿ ದೂರದಲ್ಲಿರುವ ಮೂಗನ ಹುಂಡಿಯಲ್ಲಿ ಈಗಲೂ ಗುತ್ತಿಗೆ ವಾರ–ಸಾಮೂಹಿಕ ಗುತ್ತಿಗೆ ಮುಂತಾದ್ದು ಜಾರಿಯಲ್ಲಿದೆ. ಅವರಿಗೆ ಡಿಕ್ಲರೇಷನ್ ಯಾಕೆ ಕೊಟ್ಟಿಲ್ಲ? ಅಂತ ಕೇಳಿದ್ದಕ್ಕೆ ಅವರು ಕೊಟ್ಟ ಉತ್ತರ "ಎಲ್ಲಾದ್ರೂ ಉಂಟ ಶಿವ ಒಪ್ಪಾನ, ಉಂಡ ಮನೆಗೆ ಎರಡು ಬಗೆಯುವುದಕ್ಕಾಗುತ್ತ. ಯಾರಾದ್ರೂ ಹಾಗೆ ಮಾಡಿದರೆ ನಮ್ಮ ಹಳ್ಳಿಯಲ್ಲಿ ಪಂಚಾಯ್ತಿ ಸೇರಿ 501ರೂಪಾಯಿ ದಂಡ ಹಾಕುತ್ತಾರೆ". 5ಅಂದರೆ ಮೈಸೂರಿನಿಂದ ಕೇವಲ 6 ಮೈಲಿಗಳಷ್ಟು ದೂರವಿರುವ ಊರಿನಲ್ಲೇ ಇಷ್ಟೊಂದು ಹಳ್ಳಿಯ ವ್ಯವಸ್ಥೆ ಬಂದೋಬಸ್ತಾಗಿದೆ. ಇನ್ನು ಭೂಮಾಲಿಕರ ಭಯದ ನೆರಳಲ್ಲಿ ಬದುಕುವ ಗೇಣಿದಾರ ತನ್ನ ಉಸಿರೆತ್ತಿದರೆ ಎಂಥ ಪರಿಣಾಮಗಳಾಗಬಹುದು ಅನ್ನುವುದನ್ನು ನಾವು ಕಾಣಬಹುದು,

ಹಲವಾರು ಸಂದರ್ಭಗಳಲ್ಲಿ ಗೇಣಿದಾರ ಡಿಕ್ಲರೇಷನ್ ಕೊಡುವುದಕ್ಕೆ ಅವಕಾಶವಾಗದೆ ಭಯ ಹುಟ್ಟಿಸಿ ಅವನನ್ನು ಹಿಂಸಿಸಿದ ಪ್ರಕರಣಗಳು ಹಲವಿವೆ. ಇಂಥ ಒಂದು ಘಟನೆ ದಕ್ಷಿಣ ಕನ್ನಡದ ಮುವ ಜಾಲದಲ್ಲಿ ನಡೆಯಿತು. ಈ ಘಟನೆಯ ಬಗ್ಗೆ ಕರ್ನಾಟಕದ ಎಲ್ಲಾ ಕಡೆಯಿಂದಲೂ ಜನರು ಭೂಮಾಲಿಕನ ಮತ್ತು ಸರ್ಕಾರದ ಕೈವಾಡವನ್ನು ಖಂಡಿಸಿ ಗೇಣಿದಾರನ ಹೋರಾಟಕ್ಕೆ ಬೆಂಬಲಕೊಟ್ಟಿದ್ದರು. ಡಿಕ್ಲರೇಷನ್ ಸಲ್ಲಿಸಲು ಹೋದ ಗೇಣದಾರನನ್ನು ಭೂಮಾಲೀಕರ ಕಡೆಯವರು ತಡೆದು ಹೊಡೆದರು. ನಂತರ ಭೂ ನ್ಯಾಯ ಮಂಡಳಿಗಳು ಇವನು ಉಳುತ್ತಿದ್ದ ಭೂಮಿಯನ್ನು ಕಿತ್ತು ಭೂಮಾಲಿಕರಿಗೆ ಕೊಟ್ಟವು. ಈ ಬಗ್ಗೆ ಎಸ್. ಎಕ್ಸ್. ಜೇಮ್ಸ್ ಮೆಲ್‌ಕ್ವೈರ್‌ಗೇಣಿ ಧಾರನನ್ನು ಸಂದರ್ಶಿಸಿ ಅವನ ಪ್ರಕರಣದ ಬಗ್ಗೆ ಸಂಗ್ರಹಿಸಿರುವುದನ್ನು ಹೇಳುವುದು ಸೂಕ್ತ ಅನಿಸುತ್ತದೆ. ಗೇಣಿದಾರನ ಬಾಯಿಂದಲೇ ಅವನ ಕಥೆಯನ್ನು ಕೇಳಿ.

ನೋನುಮುಕರಿಯ ಕಳಕೊಂಡ ಭೂಮಿ ಕಡೆ

ನಾನು ನೋನುಮುಕರಿ ಬೆಂಜನ ಪಡುವದ ಒಬ್ಬ ಹರಿಜನ ಗೇಣಿದಾರ. ನನ್ನ ತಂದೆ ಮತ್ತು ನಾನು ಸುಮಾರು 50 ವರ್ಷಗಳಿಂದಲೂ ಭೂಮಾಲಿಕನ ಹೆಂಡತಿಯ ಭೂಮಿಯನ್ನು ಗೇಣಿಗೆ ವ್ಯವಸಾಯ ಮಾಡುತ್ತಿದ್ದೆವು. ನಾನು 15 ವರ್ಷಗಳಿಂದ ಏಳು ಎಕರೆ ಗೇರುಪ್ಪೆ ತೋಟವನ್ನು ಗೇಣಿಗೆ ವ್ಯವಸಾಯ ಮಾಡುತ್ತಿದ್ದು ಮಾಲಿಕರಿಗೆ ಗೇಣಿ ಒಪ್ಪಿಸುತ್ತಿದ್ದೆ. ಭೂಸುಧಾರಣೆಯ ಅನ್ವಯ ನಾನು ಒಡೆತನ ಬೇಡಿ ಅರ್ಜಿ ಸಲ್ಲಿಸಬಹುದಾಗಿದ್ದರೂ ಅರ್ಜಿ ಸಲ್ಲಿಸಲಿಲ್ಲ. ಆದರೆ ಕೆಲವು ಸಮಾಜ ಕಾರ್ಯಕರ್ತರು ಹಾಗೂ ಸ್ಥಳೀಯ ಎಂ. ಎಲ್. ಎ. ಯವರ ಸಲಹೆ ಹಾಗೂ ಒತ್ತಡದ ಮೇಲೆ ಅರ್ಜಿಸಲ್ಲಿಸಿದೆ. ಅರ್ಜಿ ಸಲ್ಲಿಸಿದ ಕೂಡಲೆ ಭೂಮಾಲಿಕ ಪೋಲೀಸರ ಮೂಲಕ ಹಿಂಸಿಸ ತೊಡಗಿದ ನಾನು ಹೆದರಿ ಮನೆ ಮಠ ಎಲ್ಲ ಬಿಟ್ಟು ಎರಡು ವಾರಗಳ ಕಾಲ ತಲೆ ಮರೆಸಿಕೊಂಡಿದ್ದೆ. ಸಮಾಜ ಕಾರ್ಯಕರ್ತರ ಮೂಲಕ ಎಂ. ಎಲ್. ಎ. ಯವರನ್ನು ಭೇಟಿಯಾಗಿ ಭೂಮಾಲಿಕ ಹಾಗೂ ಪೋಲೀಸ್ ಹಿಂಸೆಯ ವಿರುದ್ಧ ದೂರು ಸಲ್ಲಿಸಿದೆ. ಜೊತೆಗೆ ಇಂಜಂಕ್ಷನ್ ಆಜ್ಞೆಯನ್ನೂ ಪಡೆದುಕೊಂಡೆ,

ಬಂಟವಾಳದ ಭೂ ನ್ಯಾಯ ಮಂಡಳಿ ನನ್ನನ್ನು ನಲವತ್ತು ಬಾರಿ ಸುತ್ತುವಂತೆ ಮಾಡಿ ಕೊನೆಗೊಮ್ಮೆ ಸ್ಥಳ ಪರಿಶೀಲನೆಗೆ ಬಂತು. ಹದಿನೈದುಮಂದಿ ನನ್ನ ಪರವಾಗಿ ಬರವಣಿಗೆಯಲ್ಲಿ ಹೇಳಿಕೆ ಕೊಡಲು ಸಿದ್ಧವಾಗಿದ್ದರೂ ಭೂಮಾಲಿಕನ ಗೈರು ಹಾಜರಿಯಲ್ಲಿ ಅದು ಸಾಧ್ಯವಾಗಲಿಲ್ಲ. ಕೊನೆಗೆ ಸ್ಥಳೀಯ ಎಂ. ಎಲ್. ಎ.ಯ ಸಲಹೆ ಮೇರೆಗೆ ತೀರ್ಪು ಭೂಮಾಲಿಕನ ಪರವಾಯಿತು ಆಗಲೇ ಈ ಎಂ.ಎಲ್. ಎ.ಯ ಇಬ್ಬಂದಿತನ ಗೊತ್ತಾದದ್ದು. ಭೂನ್ಯಾಯ ಮಂಡಲಿ ನನಗಾಗಿ ಕೇವಲ 39 ಗುಂಟೆ ಜಮೀನನ್ನು ಕೊಟ್ಟಿತು. ನನ್ನ ಸ್ವಾಧೀನದಲ್ಲಿದ್ದ ಉಳಿಕೆ ಜಮೀನನ್ನು ಭೂಮಾಲಿಕ ಅಕ್ರಮಿಸಿಕೊಳ್ಳುವಂತೆ ತೀರ್ಪು ನೀಡಿತು.

ಸ್ಥಳೀಯ ಎಂ. ಎಲ್. ಎ. ಕಮ್ಯುನಿಸ್ಟ ಹಾಗೂ ರೈತಾಪಿ ಜನರ ನಾಯಕ. ಈತ ಲಾಯರ್ ಒಬ್ಬರ ಮಧ್ಯಸ್ತಿಕೆಯಲ್ಲಿ ಮಾಲಿಕ ಹಾಗೂ ನನ್ನ ನಡುವೆ ಸಂಧಾನ ನಡೆಸಲು ಪ್ರಯತ್ನಿಸಿ ವಿಫಲನಾದಾಗ ಕೋಪಗೊಂಡ ಎಂ. ಎಲ್. ಎ. ಎಲ್ಲಾ

ಜಮೀನನ್ನು ಭೂನ್ಯಾಯ ಮಂಡಲಿಗಳ ಮೂಲಕ ಭೂಮಾಲಿಕನಿಗೇ ಕೊಡಿಸಿದ.

ಭೂ ಮಾಲೀಕನ ಸ್ವಾಧೀನದಲ್ಲಿ ಈಗಾಗಲೆ 60 ಎಕರೆಗಳಷ್ಟು ಭೂಮಿ ಇತ್ತು. ಜೊತೆಗೆ ಅವನು ಒಬ್ಬ ಡಾಕ್ಟರ್. ಹೀಗೆ ಅವನ ಬದುಕಿಗೆ ಹಲವಾರು ಮಾರ್ಗಗಳಿವೆ. ನನ್ನ ವಿಷಯ ಕೇಳಿ ಅವರ ಜಮೀನನ್ನು ಗೇಣಿಗೆ ಮಾಡುತ್ತಿದ್ದಾಗ ನನಗೆ ವರ್ಷಕ್ಕೆ 2 ಸಾವಿರ ರೂಗಳ ಆದಾಯವಿತ್ತು. ಈಗ ಅದೂ ಹೋಗಿ ದಿವಾಳಿಯಾಗಿ ದಿನಗೂಲಿ ಮಾಡುತ್ತಿದ್ದೇನೆ. 6

ಹೀಗೆ ನೋನುಮುಕರಿ ಹೇಳಿದ ಮಾತುಗಳನ್ನು ಒಂದಕ್ಕೆ ಅಗೆಯುತ್ತ ಹೋದಾಗ, ಇಂಥ ಒಂದು ಕಾನೂನು ಬರುತ್ತದೆ ಅನ್ನುವ ಮುನ್ನೆಚ್ಚರಿಕೆಯಿಂದ ಹಲವಾರು ಗೇಣಿದಾರರನ್ನು ಭೂಮಾಲಿಕರು ಬಲವಂತವಾಗಿ ಒಕ್ಕಲೆಬ್ಬಿಸಿದ ದೃಷ್ಟಾಂತಗಳನ್ನು ಕಂಡಿದ್ದೇವೆ. ಅದು ಒಂದು ರೀತಿಯ ಬಲವಂತಿಕೆಯ ಒಕ್ಕಲೆಬ್ಬಿಸುವಿಕೆಯಾದರೆ ಈ ಘಟನೆ ಕಾನೂನನ್ನು ಬಳಸಿಕೊಂಡೇ ಒಕ್ಕಲೆಬ್ಬಿಸಿರುವುದನ್ನು ನಾವು ಕಾಣಬಹುದು. ಹಾಗೆ ನೋಡಿದರೆ ಬಲಿಷ್ಠರಾದ ಭೂಮಾಲಿಕರಿಗೆ ಕಾನೂನು ನೆಪ ಮಾತ್ರ. ಅವರಿಗೆ ತೂರಿಕೊಂಡು ಹೋಗಲು ಹಲವಾರು ಕಳ್ಳ ಗಿಂಡಿಗಳು ಯಾವಾಗಲೂ ವಿಶಾಲವಾಗಿ ಬಾಗಿಲು ತೆರೆದುಕೊಂಡಿರುತ್ತವೆ. ಈ ಘಟನೆಯಲ್ಲಿ —ಉಳುವವನೇ ಭೂಮಿಯ ಒಡೆಯ ಅನ್ನುವ ಮೋಸದ ಮುಖವಾಡದಲ್ಲಿ ಭೂಮಿ ಕಳೆದು ಕೊಂಡದ್ದು ಕಾನೂನು ಬದ್ಧವಾದದ್ದು ಒಂದು ವೈಚಿತ್ರ್ಯ. ಸರಿಯಾದ ಭೂ ನ್ಯಾಯ ಮಂಡಳಿಯ ಸದಸ್ಯರಿಲ್ಲದಿದ್ದರೆ ಎಂಥ ಅನ್ಯಾಯಗಳಾಗಬಹುದು ಅನ್ನುವುದಕ್ಕೆ ಇದೊಂದು ಜೀವಂತ ಸಾಕ್ಷಿ.

ಸದಸ್ಯರು ಜಾಣರಿದ್ದರೆ ..

ಆಗುತ್ತಿರುವ ಅನ್ಯಾಯಗಳ ವಿರುದ್ಧ ಕಾಳಜಿ ಇದ್ದು ಭೂನ್ಯಾಯ ಮಂಡಲಿಯ ಸದಸ್ಯರು ಜಾಣರಾಗಿದ್ದರೆ ನಿಜವಾದ ಉಳುಮೆದಾರನಿಗೆ ಕೆಲವೊಮ್ಮೆ ಈ ಕಾನೂನುಗಳು ವರಪ್ರಧಾನವಾಗಬಹುದು. ದುಡಿಯುವ ಬಡವನಿಗೆ ಅನ್ಯಾಯವಾಗಬಾರದು ಅನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯವಹರಿಸುವ ಸದಸ್ಯರು ಬಹಳ ಕಡಿಮೆ. ಕರ್ನಾಟದಲ್ಲಿ ಇಂಥವರು ಬೆರಳೆಣಿಕೆಯಷ್ಟು ಸಿಗುವುದು ಕಷ್ಟ. ಇಂಥವರ ಬಗ್ಗೆ ಹುಡುಕುತ್ತಿದ್ದಾಗ ನನ್ನ ಕಣ್ಣಿಗೆ ಬಿದ್ದ ವ್ಯಕ್ತಿ ಎಂದರೆ ಮೈಸೂರು ತಾಲ್ಲೂಕು ಮಂಡಲಿಯಲ್ಲಿ ಹರಿಜನ ಸದಸ್ಯರಾಗಿರುವ ಮಂಟಿಲಿಂಗಯ್ಯ. ಇವರು ನಿರ್ವಹಿಸಿದ ಒಂದು ಕೇಸನ್ನು ಉದಾಹರಿಸಿದರೆ ಅವರ ಜಾಣತನ ವ್ಯಕ್ತವಾಗುತ್ತದೆ.

1979 ರಲ್ಲಿ ಇನಾಂತಿ ಜಮೀನುಗಳಿಗೆ ಸಂಬಂಧಪಟ್ಟ ಕೇಸುಗಳನ್ನು ತೀರ್ಮಾನಿಸಲು ಭೂನ್ಯಾಯ ಮಂಡಲಿಗಳಿಗೇ ವಹಿಸಲಾಯಿತು. ಹೀಗಾಗಿ ಇನಾಂತಿಗೆ ಸಂಬಂಧಪಟ್ಟ ಗೇಣಿದಾರರಾಗಿದ್ದವರ ಹಲವಾರು ಕೇಸುಗಳು ಇಲ್ಲಿ ದಾಖಲಾದವು. ಗ್ರಾಮಾಂತರ ಪ್ರದೇಶದ ಭೂ ಸಂಬಂಧವಾದ ರಚನೆಯೊಳಗೆ ಇನಾಂತಿ ಜಮೀನು ಅಂದರೆ ಬಹಳಷ್ಟು ದೇವಸ್ಥಾನಗಳಿಗೆ ಸಂಬಂಧಪಟ್ಟ ಇರುವ ಜಮೀನುಗಳು. ಇಂಥ ಇನಾಂತಿಗಳು ಸಾಮಾನ್ಯವಾಗಿ ದೇವರ ಹೆಸರಿನಲ್ಲೇ ಇರುತ್ತದೆ ಅಲ್ಲಿಯ ಪೂಜಾರಿ ಇದರ ಉಸ್ತುವಾರಿ ನೋಡಿಕೊಳ್ಳುತ್ತಿರುತ್ತಾನೆ. ಆದರೆ ನಿಜವಾದ ಉಳುಮೆದಾರ ಬೇರೆಯವನಾಗಿರುತ್ತಾನೆ. ಇಲ್ಲಿ ದೇವರು ಮತ್ತು ಹಳ್ಳಿಯ ಹತ್ತು ಸಮಸ್ತರು ಮುಖ್ಯರಾಗಿದ್ದು ಸಾಮಾನ್ಯವಾಗಿ ಗೇಣಿದಾರನ ಹಿತವನ್ನು ಕಡೆಗಣಿಸಲಾಗುತ್ತದೆ. ದೇವರ ಜಮೀನಿಗೆ ಸಂಬಂಧಪಟ್ಟಂತೆ ಟ್ರಿಬ್ಯುನಲ್ ಸದಸ್ಯರ ಪ್ರತಿಕ್ರಿಯೆ ನೋಡಿದರೆ ಎಂಥ ಮೌಢ್ಯತೆ ತುಂಬಿದೆ ಅನಿಸುತ್ತದೆ.

ಮೈಸೂರಿನ ಸದಸ್ಯರೊಬ್ಬರ ಪ್ರಕಾರ ದೇವರ ಹೆಸರಿನಲ್ಲಿರುವ ಜಮೀನನ್ನು ಗೇಣಿದಾರನಿಗೆ ಮಾಡಿಕೊಡುವ ಸಂದರ್ಭದಲ್ಲಿ ತೀರ್ಪು ನೀಡಬೇಕಾದಾಗ ಕೆಲವು ಸದಸ್ಯರು ಗೈರು ಹಾಜರಾಗುತ್ತಾರೆ. ಇದಕ್ಕೆ ಕಾರಣ ದೇವರ ಜಮೀನಿನ ವಿರುದ್ಧ ತೀರ್ಪು ನೀಡಿದರೆ ತಮಗೇನು ಕೇಡಾಗುವುದೊ ಅನ್ನುವ ಭಯ. ಬಹಳ ಕಡೆಗಳಲ್ಲಿ ದೇವರ ಜಮೀನನ್ನು ಗೇಣಿಗೆ ಮಾಡುತ್ತಿದ್ದೆ ಅಂತ ಅರ್ಜಿ ಹಾಕುವುದು ಪಾಪ ಅನ್ನುವ ನಂಬಿಕೆ ಇದ್ದರೆ ಇನ್ನು ಕೆಲವು ಕಡೆ ದೇವರ ಜಮೀನಿಗೆ ಅರ್ಜಿ ಹಾಕುವುದನ್ನು ದೇವರ ವಿರುದ್ಧದ ಕೆಲಸ ಅಂತ ಜನಗಳೇ ತಡೆಗಟ್ಟುತ್ತಾರೆ. ಅರ್ಜಿ ಹಾಕಿದಂಥ ಬಹಳಷ್ಟು ಕೇಸುಗಳಲ್ಲಿ ರಾಜಿ ಮಾಡಿ ದೇವರಿಗರ್ಧ ಗೇಣಿದಾರನಿಗರ್ಧ ಬಿಟ್ಟುಕೊಡುವ ಪರಿಪಾಠವೇ ಹೆಚ್ಚು.

ಸಾಮಾನ್ಯವಾಗಿ ಆಳುವ ಪಕ್ಷದ ಪ್ರತಿನಿಧಿಗಳು ಯಾವಾಗಲೂ ತಮ್ಮ ಪಕ್ಷದ ಹಿತವನ್ನು ಗಣಿಸುತ್ತಾರೆಯೇ ಹೊರತು ಇವರಿಗೆ ಕಾನೂನು ಅಥವಾ ನ್ಯಾಯ ಮುಖ್ಯವಲ್ಲ. ಪಕ್ಷಕ್ಕೆ ಅಥವಾ ತಾವು ಮುಂದೆ ಚುನಾವಣೆಗೆ ನಿಂತಾಗ ತಮಗೆ ಓಟುದಕ್ಕಬೇಕು ಅನ್ನುವ ದೃಷ್ಟಿಯಿಂದ ನಿಜವಾದ ದುಡಿಮೆದಾರನಲ್ಲದ ಭೂಮಾಲಿಕನಿಗೇ ಭೂಮಿ ದಕ್ಕುವಂತಹ ವಂಚನೆಯ ತೀರ್ಪುಗಳನ್ನು ಕೊಡುತ್ತಾರೆ. ಈ ಬಗ್ಗೆ ಇವರನ್ನು ಪ್ರಶ್ನಿಸಿದಾಗ ನಮಗೆ ಕಾನೂನು ಮತ್ತು ನ್ಯಾಯ ಮುಖ್ಯವೇ ಹೊರತು ಪಕ್ಷದ ಹಿತ ಮುಖ್ಯವಲ್ಲ ಅಂತ ಎಲ್ಲ ಸದಸ್ಯರು ಹೇಳುತ್ತಾರೆ.ಆದರೆ ನಿಜವಾಗಿ ನಡೆಸುವ ಹಿಕಮತ್ತುಗಳೆ ಬೇರೆಯಾಗಿರುತ್ತವೆ. ಇಂಥ ತೀರ್ಪಿಗೆ ಇಲ್ಲೊಂದು ಉದಾಹರಣೆ ಇದೆ. ಇಲ್ಲಿ ಸದಸ್ಯ ಸಿದ್ಧರಾಮಯ್ಯನವರು ನ್ಯಾಯಕ್ಕಾಗಿ ನಡೆಸಿದ ಪ್ರಯತ್ನವನ್ನೂ ಕಾಣಬಹುದು.

ಮೈಸೂರು ತಾಲ್ಲೂಕು ಜಯಪುರ ಹೋಬಳಿಯ ಚಿಕ್ಕ ಕಾಡೂರಿಗೆ ಸಂಬಂಧಿಸಿದ ಇನಾಂತಿ ಜಮೀನು ಕೆ. ಎಲ್. ಆರ್. ಎಂ:-ಐಎನ್‌ಎ 660-80, 81-770 80-81... ಡಿ ಎಕರೆ 30 ಗುಂಟೆ ಮಾರಮ್ಮನ ಕೊಡುಗೆಯಾಗಿ ಪೂಜಾರಿ ಮಾದನಾಯಕನಿಗೆ ಬಂತು. ಈ ಜಮೀನನ್ನು ಹರಿಜನರ ಜಾತಿಗೆ ಸೇರಿದ ರಾಮಯ್ಯ ಮತ್ತು ದ್ಯಾವಯ್ಯ ಉಳುಮೆ ಮಾಡುತ್ತಿದ್ದರು. ಇವರು ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದರು. ಆದರೆ 1932ರ ಏಕಸಾಲಿನ ಗುತ್ತಿಗೆ ಕರಾರು ಹೊರತಾಗಿ ಬೇರೆ ಯಾವ ದಾಖಲೆಯೂ ಇವರ ಬಳಿ ಇರಲಿಲ್ಲ. ಪೂಜಾರಿ ಮಾದನಾಯಕ ಗ್ರಾಮಲೆಕ್ಕಿಗ ಮುಂತಾದವರನ್ನು ಬುಟ್ಟಿಗೆ ಹಾಕಿಕೊಂಡು ಪಾಣಿ ಫಸಲಿನ ಚೀಟಿಯನ್ನೆಲ್ಲಾ ಬರೆಸಿಕೊಂಡಿದ್ದ. ಹೀಗಾಗಿ ಗೇಣಿದಾರರ ಪರವಾಗಿ ತೀರ್ಪು ಕೊಡುವುದು ಕಷ್ಟವಾಗಿತ್ತು. ಆದರೆ ಮೇಲೆ ಹೇಳಿದ ಜಾಣ ಸದಸ್ಯರು ಸತ್ಯಾಂಶವನ್ನು ಹೊರಗೆಡಹಲು ಎರಡೂ ಕಡೆಯವರಿಗೂ ಈ ಕೆಳಕಂಡ ಪ್ರಶ್ನೆ ಹಾಕಿ ಸತ್ಯಾಸತ್ಯತೆಯನ್ನು ಅರಿಯಲು ಪ್ರಯತ್ನಿಸಿದರು.

ಅವರು ಕೇಳಿದ ಪ್ರಶ್ನೆಗಳು :–

1. ಜಮೀನಿಗೆ ಹಾಕಿರುವ ಬೇಲಿ ಎಂಥದ್ದು ?
2. ಆ ಜಮೀನಿನಲ್ಲಿರುವ ಮರಗಳೆಷ್ಟು ?
3. ಎಷ್ಟು ಮರದ ಬೊಡ್ಡೆಗಳಿವೆ ?
4. ಯಾವ ಭತ್ತ ಹಾಕಿದ್ದೀರಿ ?
5. ಎಷ್ಟು ತಿಂಗಳ ಸಸಿಗಳು ?

ಎರಡೂ ಕಡೆಯವರ ಉತ್ತರಗಳನ್ನು ಪಡೆದು ಮೂರನೆಯ ದಿನವೇ ಸ್ಥಳ ಪರೀಕ್ಷೆಗೆ ಹೋಗಿ ಮಹಜರು ಮಾಡಲಾಗಿ ಪೂಜಾರಿ ಜಮೀನಿನ ಉಳುಮೆದಾರ ಅಲ್ಲವೆಂತಲೂ ಗೇಣಿದಾರರಾದ ಹರಿಜನ ರಾಮಯ್ಯ ಮತ್ತು ದ್ಯಾವಯ್ಯ ನಿಜವಾದ ಉಳುಮೆದಾರರೆಂದು ಸಾಬೀತಾಯಿತು. ಆದರೆ ಆ ಊರಿನ ಜನರೆಲ್ಲರೂ ಜಮೀನನ್ನು ಪೂಜಾರಿಗೆ ಸಿಕ್ಕಬೇಕು. ಊರಿನ ಓಟೆಲ್ಲ ನಿಮ್ಮ ಪಕ್ಷಕ್ಕೆ ಬೇಕಾದರೆ ಆ ಜಮೀನನ್ನು ಪೂಜಾರಿಗೆ ಕೊಡಬೇಕು ಅನ್ನುವ ಒತ್ತಾಯ ತಂದರು. ಈ ಕಾರಣಕ್ಕಾಗಿ ಮೂವರು ಸದಸ್ಯರು ಪೂಜಾರಿಯ ಪರವಾಗಿಯೂ ಒಬ್ಬರು ಮಾತ್ರ ಗೇಣಿದಾರರ ಪರವಾಗಿಯೂ ತೀರ್ಪಿತ್ತರು. ಮೆಜಾರಿಟಿ ತೀರ್ಪು ಪೂಜಾರಿಯ ಪರವಾಯಿತು. ನ್ಯಾಯ ಕಂಡರೂ ಅನ್ಯಾಯದ ತೀರ್ಪು ನೀಡಲಾಗಿ ಗೇಣಿದಾರರನ್ನು ಉಳುಮೆದಾರರಲ್ಲವೆಂದು ಅಮಾನತ್ತುಗೊಳಿಸಲಾಯಿತು. ಆದರೆ ಕಾನೂನು ಪ್ರಕಾರ ಈ ಜಮೀನು ಪೂಜಾರಿಗೆ ಹೋಗುವುದಿಲ್ಲ. ಯಾಕೆಂದರೆ ಇನಾಂ ಅಬಾಲಿಷನ್ ಆಕ್ಟ್ 10-(11) (ಎ)ಪ್ರಕಾರ

ಓಜಿಮ್ಯಾಂಡಿಯಸ್

ನಾನು ಭೆಟ್ಟಿಯಾದ ಪುರಾತನ ಪ್ರದೇಶದ ಪಯಣಿಗನೊಬ್ಬ
ಹೇಳಿದ: ಎರಡು ದೊಡ್ಡ ಮತ್ತು ದೇಹರಹಿತ ಕಲ್ಲಿನ ಕಾಲುಗಳು
ಮರುಭೂಮಿಯಲ್ಲಿ ನಿಂತಿವೆ. ಅವುಗಳ ಬಳಿ, ಮರಳಿನ ಮೇಲೆ
ಅರೆಹೂತು, ಒಂದು ಶಿಥಿಲ ಮುಖ ಬಿದ್ದಿದೆ. ಅದರ ಸಿಡುಕು
ಮತ್ತು ಗಂಟು ತುಟಿ, ಮತ್ತು ಶೀತಲ ಅಧಿಕಾರದ ತಿರಸ್ಕಾರ
ಈ ನಿರ್ಜೀವ ವಸ್ತುಗಳ ಮೇಲೆ ಇನ್ನೂ ಮುದ್ರಿತವಿರುವ
ಅಣಕಿಸಿದ ಕೈ, ಒದಗಿಸಿದ ಹೃದಯಗಳನ್ನ ಬಿಟ್ಟು ಉಳಿದಿರುವ, ಆ
ಭಾವೋತ್ಕರ್ಷಗಳನ್ನ ಅದರ ಶಿಲ್ಪಿ ಚೆನಾಗಿ ತಿಳಿದ ಎಂದು ಹೇಳುತ್ತವೆ.
ಮತ್ತು ಪೀಠದ ಮೇಲೆ ಈ ಮಾತುಗಳು ಕಾಣುತ್ತವೆ:
'ನನ್ನ ಹೆಸರು ಓಜಿಮ್ಯಾಂಡಿಯಸ್, ರಾಜಾಧಿರಾಜ:
ನನ್ನ ಕಾರ್ಯಗಳನ್ನ ನೋಡಿ, ಓ ಮಹಾಪ್ರಬಲರೆ, ಮತ್ತು ಹತಾಶರಾಗಿ!'
ಅಷ್ಟೆ, ಇನ್ನೇನೂ ಉಳಿದಿಲ್ಲ. ಆ ಬೃಹತ್ ಭಗ್ನ
ಅವಶೇಷದ ಸುತ್ತ, ಅಪರಿಮಿತ ಮತ್ತು ನಗ್ನ
ಏಕ ಮೇವ ಮತ್ತು ಏಕತ್ರ ಮರಳು ಚಾಚಿದೆ ದೂರ ಬಹುದೂರ.

—ಪಿ. ಬಿ. ಶೆಲ್ಲಿ

ಅನುವಾದ : ಎಸ್. ಮಂಜುನಾಥ್

ಡಿ.ಸಿ. ಯವರಿಗೆ ಅರ್ಜಿ ಸಲ್ಲಿಸಿ ತಮ್ಮ ಹೆಸರಿಗೆ ನೊಂದಾಯಿಸಿಕೊಳ್ಳ ಬೇಕಾಗಿತ್ತು. ಹಾಗೆ ಮಾಡದಿದ್ದರೆ ಈ ಜಮೀನು ಸರ್ಕಾರದ ವಶಕ್ಕೆ ಹೋಗುತ್ತದೆ. ಈಗ ಊರಿನ ಜನ ಮತ್ತು ಪೂಜಾರಿ ಆ ಜಮೀನನ್ನು ಸರ್ಕಾರದಿಂದ ತಾವು ದಕ್ಕಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಈ ಕೇಸಿನಲ್ಲಿ ದೇವರು ಮತ್ತು ರಾಜಕೀಯ ಪಕ್ಷದ ಒತ್ತಡ ಎರಡೂ ಸೇರಿದ್ದರಿಂದ ಗೇಣಿದಾರರು ಅಂತ ಸಾಬೀತಾದರೂ ಉಳುಮೆ ಮಾಡುತ್ತಿದ್ದ ಗೇಣುದಾರರು ಭೂಮಿಯನ್ನು ಕಳೆದುಕೊಂಡರು. ಈ ಗೇಣಿದಾರರನ್ನು ಕೇಳಿದರೆ ಬಹುಶಃ "ನಾವು ಅರ್ಜಿ ಹಾಕದೆ ಇದ್ದಿದ್ದರೆ ಹೇಗೂ ಅಲ್ಪ ಸ್ವಲ್ಪ ದುಡಿದು ಹೊಟ್ಟೆಹೊರೆಯುತ್ತಿದ್ದೊ ಈಗ ಕೂಲಿ ಕೆಲಸ ಮಾಡಿಕೊಂಡು ಅವರ ಹತ್ತಿರವೇ ದೈನ್ಯವಾಗಿ ಬದುಕ ಬೇಕಾಗಿದೆ," ಅನ್ನಬಹುದು.

REFERENCE

1 M A S Rajan—
'Working of landtribunalsof karnataka' Paper presented in a symposium held at I S E C on 18th march 1982 un-published paper page-206-207.

2 Karnataka legislative council Debates Date 29-8-1974 page 405

3 Karnataka land Journal 1975 (2) 197

4 M A S Rajan— Ibid page 222 (Wip No 3884/1976. Venkata ragavahia. J)

5 4-3-1983 ರಂದು ಮೂಗನ ಹುಂಡಿ ಯವರೊಡನೆ ಮಾಡಿದ ಸಂದರ್ಶನ,

6 Implementation of land reforms problems & prospecks-by S.X. James Melchoir—E P W Vol. XIV No 18 May 5, 1979.

(ಮುಂದುವರಿತ್ತದೆ)

(1ನೇ ಪುಟದಿಂದ)

ಬಹಿಷ್ಕಾರವಿರುತ್ತದೆ. ಅಸ್ಪೃಶ್ಯರು ದೇವಸ್ಥಾನಗಳಲ್ಲಿ ಅರ್ಚಕ ವೃತ್ತಿಯನ್ನು ಅವಲಂಬಿಸುವುದಿರಲಿ ದೇವಸ್ಥಾನ ಪ್ರವೇಶಕ್ಕೂ ಅವಕಾಶವಿಲ್ಲದೆ ಅಸ್ಪೃಶ್ಯರು ಸ್ವಾವಲಂಬಿಗಳಾಗಿ ಬಾಳಲು ಅವಕಾಶಗಳಿರುವುದಿಲ್ಲ. ಅಸ್ಪೃಶ್ಯರ ಜೀವನ ಮಾನವರು ಬಳಸುವ ನಿರ್ಜೀವ ವಸ್ತುಗಳಾದ ಪಾದರಕ್ಷೆ ಮತ್ತು ಪ್ರಾಣಿಗಳಿಗಿಂತ ನಿಕೃಷ್ಟವಾಗಿರುತ್ತದೆ. ಹಿಂದೂ ಧರ್ಮದ ಉಳಿವಿಗಾಗಿ ಅಸ್ಪೃಶ್ಯತಾ ಉಳಿವು ಅನಿವಾರ್ಯ ಎಂಬುದು ಹಿಂದೂ ಧರ್ಮದ ಮುಖ್ಯ ಅನಿಸಿಕೆ. ರಾಷ್ಟ್ರೀಯ ಸಮಸ್ಯೆಯಾದ ಅಸ್ಪೃಶ್ಯತೆ, ಸಮಾಜದ ಮಾನಸಿಕ ಪರಿವರ್ತನೆಯಿಂದಾಗಲಿ, ಕಾನೂನು ಬೆಂಬಲದಿಂದಾಗಲಿ, ಅಸ್ಪೃಶ್ಯರ ಆರ್ಥಿಕ ಸುಧಾರಣೆಯಿಂದಾಗಲಿ, ನಿವಾರಣೆಯಾಗುವ ಸಂಭವ ವಿರಳ. ಮತಾಂತರದಿಂದ ಅಥವಾ ಹೊಸ ಮತ ಸ್ಥಾಪನೆಯಿಂದ ಮಾತ್ರ ಅಸ್ಪೃಶ್ಯತಾ ನಿವಾರಣೆ ಸಾಧ್ಯವೆಂಬುದು ಅಸ್ಪೃಶ್ಯರ ಮನವರಿಕೆ.

ಳ) ಯಾವ ಮತಧರ್ಮ ಮತ್ತು ಸಂಗಡಗಳಿಗೆ ಸೇರದ ಅಸ್ವತಂತ್ರ ಅಸ್ಪೃಶ್ಯರು ಸ್ವತಂತ್ರರಾಗಿ ಬಾಳಲು ಅನುಸರಿಸಬೇಕಾಗಿರುವ ಮಾರ್ಗ

ಪ್ರತಿಯೊಬ್ಬ ಭಾರತೀಯನಿಗೂ ಇರುವ ವಯಸ್ಕ ಮತಧಾನದ ಹಕ್ಕು ಭಾರತದ ಅಸ್ಪೃಶ್ಯನಿಗಿರುವುದು ನಿಜ. ಶಾಸನ ಸಭೆಗಳಲ್ಲಿ ಅಸ್ಪೃಶ್ಯರಿಗೆ ರಾಜಕೀಯ ಮೀಸಲಾತಿ ಇದ್ದಾಗ್ಯೂ ಬಹುಸಂಖ್ಯಾತ ಅಸ್ಪೃಶ್ಯೇತರರಿಂದ ಆರಿಸಲ್ಪಡುವ ಅಸ್ಪೃಶ್ಯ ಶಾಸಕ ಅಸ್ಪೃಶ್ಯರ ಪ್ರತಿನಿಧಿಯಾಗಲು ಅವಕಾಶಗಳಿರುವುದಿಲ್ಲ. ಯಾವ ಮತ, ಧರ್ಮ, ಸಂಗಡಗಳಿಗೆ ಸೇರದ ಅಸ್ಪೃಶ್ಯರು ದೇಶದಲ್ಲಿ ಪರಾವಲಂಬಿಗಳಾಗಿ, ಗುಲಾಮರಾಗಿ ಬಾಳಲು ಅವಕಾಶವಿದೆಯೇ ವಿನಹ ಸ್ವಾವಲಂಬಿಗಳಾಗಿ ಸ್ವತಂತ್ರ ಬಾಳ್ವೆ ನಡೆಸಲು ಸಾಧ್ಯವಿಲ್ಲ.

ಅಸ್ಪೃಶ್ಯರ ವಯಸ್ಕ ಮತ ಧಾನದ ಹಕ್ಕು ಮತ್ತು ರಾಜಕೀಯ ಮೀಸಲಾತಿ ಕುಟಿಲ, ಕುತಂತ್ರ ಮೋಸಗಳಿಂದ ಕೂಡಿದ್ದಾಗಿ ವಂಚಿತರಾದ ಅಸ್ಪೃಶ್ಯರು ಅಸ್ವತಂತ್ರರು. ಇಂದು ಅಸ್ಪೃಶ್ಯರಿಗೆ ನೀಡಿರುವ ವಯಸ್ಕ ಮತಧಾನದ ಹಕ್ಕು ಮತ್ತು ರಾಜಕೀಯ ಮೀಸಲಾತಿ ನಿಷ್ಪ್ರಯೋಜಕ ಮತ್ತು ನಿರರ್ಥಕ. ಅಸ್ವತಂತ್ರ ಅಸ್ಪೃಶ್ಯರು ಸ್ವಾಭಿಮಾನಿಗಳಾಗಿ, ಸ್ವಾವಲಂಬಿಗಳಾಗಿ, ಸ್ವತಂತ್ರರಾಗಿ ಬಾಳಲು ಪ್ರತ್ಯೇಕ ಮತಧಾನದ ಪದ್ಧತಿ ಅಥವಾ ಪ್ರತ್ಯೇಕ ರಾಷ್ಟ್ರಕ್ಕಾಗಿ ಹೋರಾಟ ಮಾಡುವುದು ಒಳಿತು ಎಂಬುದು ಅಸ್ಪೃಶ್ಯರ ಅಭಿಪ್ರಾಯ.

"ಸರ್ ಕೈಯಿಂದ ಹೊಡೀಬೇಡಿ ಕೋಲಿಂದ ಹೊಡೆಯಿರಿ"

ನಮ್ಮ ಭರತ ಖಂಡದಲ್ಲಿ ಪಂಡಿತರ ಸ್ವಾರ್ಥತನದಿಂದ ಮೇಲೆದ್ದವರ ಅಹಂಕಾರದಿಂದ ಕೆಳಗೆ ಬಿದ್ದವರ ಹೇಡಿತನದಿಂದ ಜಾತೀಯತೆ ಮತ್ತು ಅಸ್ಪೃಶ್ಯತೆಯ ವಿಷದ ಜ್ವಾಲೆಯು ಮಾನವೀಯ ಮೌಲ್ಯವನ್ನು ದಹಿಸುತ್ತಾ ಬಂದಿದೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ಮುಂತಾದ ಮಹನೀಯರು ಈ ವಿಷಜ್ವಾಲೆಯನ್ನು ನಂದಿಸಲು ಜೀವನ ಪರ್ಯಂತ ಹೋರಾಟ ನಡೆಸಿದರೂ ಸಫಲವಾಗಲಿಲ್ಲ. ಸ್ವಾತಂತ್ರ ಬಂದನಂತರ ಸಂವಿಧಾನದಲ್ಲಿ ಜಾತೀಯತೆ ಮತ್ತು ಅಸ್ಪೃಷ್ಯತೆ ಅಪರಾಧವೆಂದು ಪರಿಗಣಿಸಿ, ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಸರ್ವರಿಗೂ ಕಲ್ಪಿಸಿಕೊಟ್ಟಿರುವುದು ಸರಿಯಷ್ಟೆ. ಜೊತೆಗೆ ಅಂದಿನಿಂದಲೂ, ಸರಕಾರಗಳು ಮತ್ತು ರಾಜಕೀಯ ಮುಖಂಡರು ಈ ಆನಿಷ್ಟವನ್ನು ತೊಲಗಿಸಲು ಮಾಡುತ್ತಿರುವ ಕುತ್ತಿಗೆ ಮೇಲಿನ ಘೋಷಣೆಗಳು ಕಾರ್ಯರೂಪದಲ್ಲಿ ಬಂದಿಲ್ಲ. ಆಧುನಿಕ ಯುಗದಲ್ಲೂ ಸಹಿತ ಜಾತೀಯತೆ ಮತ್ತು ಅಸ್ಪೃಶ್ಯತೆಯ ನಿಸಾನೆಯು ಗಗನದಲ್ಲಿ ಹಾರಾಡುತ್ತಿರುವುದು ವಿಷಾದಕರ.

ಐದು ವರ್ಷಗಳ ಹಿಂದೆ ಶಿವಮೊಗ್ಗದ ಸೊರಬ ತಾಲ್ಲೂಕು ಗುಡವಿ ಗ್ರಾಮದಲ್ಲಿರುವ ಹಿರಿಯ ಪ್ರಾಥಮಿಕ ಪಾಠಶಾಲೆಗೆ ಉಪಾಧ್ಯಾಯನಾಗಿ ನೇಮಕಹೊಂದಿ ಕುತೂಹಲದಿಂದ ಶಿವಮೊಗ್ಗದಿಂದ ಪ್ರಯಾಣ ಬೆಳಸಿದೆ. ಬನವಾಸಿ ಸಮೀಪದಲ್ಲಿರುವ ತೆಕ್ಕೂರಿನ ಬಸ್ಸು ನಿಲ್ದಾಣದಲ್ಲಿ ಕೆಳಗಿಳಿದು ಕಲ್ಲಿನ ಮೇಲೆ ಕುಳಿತಿದ್ದ ಒಬ್ಬ ಯಜಮಾನನನ್ನು ಗುಡವಿಗೆ ಹೋಗುವ ದಾರಿ ಯಾವುದು ? ಎಷ್ಟು ದೂರವಿದೆ ? ಎಂದು ಕೇಳಿದೆ. ಅವನು ತಾವು ಯಾರು? ಎಲ್ಲಿಗೆ ಹೋಗ ಬೇಕು? ಎಂದು ಪ್ರಶ್ನಿಸಿದ. ನಾನು ಉಪಾಧ್ಯಾಯ, ಗುಡವಿಗೆ ಹೋಗಬೇಕು ಎಂದು ಉತ್ತರಿಸಿದೆನು. ತಾವು ಯಾವ ಜಾತಿ ? ಎಂದು ಕೇಳಿದ ಮರು ಪ್ರಶ್ನೆಗೆ ಸಂಕೋಚವಿಲ್ಲದೆ 'ಹೊಲೆಯ' ಎಂದೆನು. ತಕ್ಷಣವೇ ಹಳಿಸಿದ ಮುಖ ಮಾಡಿಕೊಂಡು ನನಗೆ ಗೊತ್ತಿಲ್ಲ ಎನ್ನುತ್ತಾ ಜಾಗಖಾಲಿ ಮಾಡಿದನು. ನಂತರ ದಾರಿಯಲ್ಲಿ ಹೋಗುತ್ತಿದ್ದ ಹುಡುಗನನ್ನು ಕೇಳಿದಾಗ ತೋರಿಸಿದ ದಾರಿಹಿಡಿದು ಕಾಡುಮೇಡು ಸುತ್ತಿ ಬಸವಳಿದು ಕೊನೆಗೆ ಶಾಲೆ ತಲುಪಿದೆನು. ಏಳು ತರಗತಿಗಳಿರುವ ಶಾಲೆಯಲ್ಲಿ ಇಬ್ಬರೇ ಉಪಾಧ್ಯಾಯರು ಇದ್ದರು. ಇನ್ನೊಬ್ಬ ಉಪಾಧ್ಯಾಯರು ಬಂದರೆಂದು ಮಕ್ಕಳ ಮತ್ತು ಉಪಾಧ್ಯಾಯರ ಮುಖಗಳು ಅರಳಿದವು. ಮುಖ್ಯೋಪಾಧ್ಯಾಯರಾದ ಬಸಪ್ಪ ಗೌಡರು ನಿಮ್ಮ ಹೆಸರೇನು ? ಎಂದು ಕೇಳಿದರು. ಚಂದ್ರಪ್ಪನೆಂದು ಉತ್ತರಿಸಿದೆ. ಯಾವ ಊರು ? ಎಂಬ ಪ್ರಶ್ನೆಗೆ ಶಿವಮೊಗ್ಗ ತಾಲ್ಲೂಕಿನ ಹರಮಘಟ್ಟ ಎಂದೆನು. ನಂತರ ಪಕ್ಕದಲ್ಲಿ ಕುಳಿತಿದ್ದ ಈರಪ್ಪ ಮೇಸ್ತ್ರು ನಿಮ್ಮ ಜಾತಿ ಯಾವುದು ? ಎಂದು ಪ್ರಶ್ನಿಸಿದರು. ದೊಡ್ಡ ದನಿಯಲ್ಲಿಯೇ 'ಹೊಲೆಯ.' ಎಂದುತ್ತರಿಸಿದೆ. ಕುತೂಹಲದಿಂದ ಉತ್ತರವನ್ನು ನಿರೀಕ್ಷಿಸುತ್ತಿದ್ದ ಉಪಾಧ್ಯಾಯರ ಮತ್ತು ಮಕ್ಕಳ ಮುಖಗಳು ಬಾಡಿದವು. ಡ್ಯೂಟಿ ರಿಪೋರ್ಟ್ ಮಾಡಿಕೊಂಡನಂತರ ಮುಖ್ಯೋಪಾಧ್ಯಾಯರು ದೂರದಿಂದ ಹಾಜರಿ ಪುಸ್ತಕವನ್ನು ಮೇಜಿನ ಮೇಲೆ ದೂಡಿ ಸಹಿಹಾಕಲು ಹೇಳಿದರು. ಅಂದು ನನ್ನ ಯೋಗ ಕ್ಷೇಮವನ್ನು ಯಾರೂ ವಿಚಾರಿಸಲಿಲ್ಲ. ಒಂದು ಲೋಟ ನೀರನ್ನೂ ಸಹ ಕೊಡಲಿಲ್ಲ. ಈ ಊರಲ್ಲಿ ತಂಗಲು ಅವಕಾಶ ಮಾಡಿಕೊಡಿ; ಹೊಸಬನಾದ ನನಗೆ ಸಹಕರಿಸಿ ಎಂದು ಹಲುಬಿದರೂ ಉಪಾಧ್ಯಾಯ ಮತ್ತು ಶಾಲಾ ಸುಧಾರಣಾ ಸಮಿ

ಅನುಭವದ ಗಣಿಯಿಂದ

○ ಚಂದ್ರಪ್ಪ ಹರಮುಘಟ್ಟ

ಸದಸ್ಯರು ಅಸಹಾಯಕರಂತೆ ಉತ್ತರಿಸಿದರು. ಸೊರಬಕ್ಕಾದರೂ ಹೋಗೋಣವೆಂದು ಬಸ್ಸುಗಳ ಅನುಕೂಲವಿಲ್ಲದ ಕಾರಣ, ಸುರಿಯುತ್ತಿರುವ ಜಡಿ ಮಳೆ ಕೊರೆಯುತ್ತಿರುವ ಬಿರುಗಾಳಿ ನನ್ನ ಶರೀರವನ್ನು ನಡುಗಿಸುತ್ತಿದ್ದರೂ ಸಹಿತ ನಡೆದುಕೊಂಡು ಹೊರಟೆನು. ನಾನು ಹೋಗುತ್ತಿರುವುದನ್ನು ಬೆಕ್ಕಸ ಬೆರಗಾಗಿ ಹೊಸ ಮೃಗವನ್ನು ನೋಡುವಂತೆ ಜನರು ನೋಡುತ್ತಿದ್ದರು. ಊರಿನಿಂದ ಸ್ವಲ್ಪ ದೂರದಲ್ಲಿ ಭಾರಿ ಮಳೆಯಿಂದ ಹಳ್ಳವು ತುಂಬಿ ಹರಿಯುತ್ತಿತ್ತು. ದಾಟಲು ಹೋಗುತ್ತಿರುವಾಗ ನೀರಿನ ಸೆಳೆತಕ್ಕೆ ಸಿಲುಕಿ ತೇಲಿಕೊಂಡು ಹೋದೆನು. ಆಗ ಚೀರಿಕೊಳ್ಳುತ್ತಾ ಮುಳುಮುಳುಗಿ ಏಳಲಾರಂಬಿಸಿದೆನು. ಯಾರೊಬ್ಬರೂ ಸಹಿತ ನನ್ನ ಸಹಾಯಕ್ಕೆ ಬರಲಿಲ್ಲ, ದೂರದಿಂದಲೇ ನೋಡುತ್ತಿದ್ದರು. ಕೊನೆಯಲ್ಲಿ ನೀರಿನಲ್ಲಿ ತೇಲುತ್ತಿದ್ದ ಬಳ್ಳಿ ಹಿಡಿದು ದಡದಮೇಲೆ ಬಂದೆನು. ಒದ್ದೆ ಬಟ್ಟೆಯಲ್ಲಿಯೇ ಕಾರ್ಗತ್ತಲಲ್ಲಿ ದಟ್ಟ ಅರಣ್ಯದ ಕಾಲು ಹಾದಿಯಲ್ಲಿ ಸುಮಾರು ಹತ್ತು ಮೈಲಿ ದೂರ ನಡೆದು ಅಂತು ಸೊರಬ ತಲುಪಿ ಪರಿಚಯಸ್ಥರ ಮನೆಯಲ್ಲಿ ಉಸಿರಾಡಿದೆನು.

ಮರುದಿನ ಬೆಳಿಗ್ಗೆ ಪುನಃ ಗುಡವಿ ಶಾಲೆಗೆ ಹೋದೆನು. ಅಂದು ರಾತ್ರಿ ಊರಿಂದ ಹೊರಗೆ ಕಾರ್ಗತ್ತಲಲ್ಲಿ ಬಿಕೊ ಎನ್ನುವ ಶಾಲೆಯಲ್ಲಿ ಒಂಟಿಯಾಗಿ, ತಂದಿದ್ದ ರೊಟ್ಟಿ ತಿಂದು ನೀರು ಕುಡಿಯದೇ ಮಲಗಿಕೊಂಡೆನು. ಬೆಳಗಾದ ಮೇಲೆ ಕೆರೆಗೆ ಹೋಗಿ ನೀರ್ಕುಡಿದು ಬಂದೆನು. ಎಷ್ಟು ಪ್ರಯತ್ನ ಮಾಡಿದರೂ ಒಂದು ರೂಂ ಕೊಡಲಿಲ್ಲ. ಕೊನೆಯಲ್ಲಿ ಶಾಲೆಯಲ್ಲಿಯೇ ಬಿಡಾರ ಮಾಡಿದೆ. ಪರಿಸರವೇ ನನಗೆ ವಿರೋಧವಾದಂತೆ ತೋರುತ್ತಿತ್ತು. ಪೂರ್ಣ ಮಳೆಗಾಲವಾದ್ದರಿಂದ ಮಲೆನಾಡಿನ ಶೀತಜ್ವರ ಕಾಡುತ್ತಿತ್ತು. ಜೊತೆಗೆ ಸಹದ್ಯೋಗಿಗಳಾಗಲೀ ಜನರಾಗಲಿ ನನ್ನ ಜೊತೆ ಬೆರೆಯಲಿಲ್ಲ. ಶಾಲಾ ಮಕ್ಕಳೂ ಸಹಿತ ಬಹುದೂರ ಇರಲು ಜಾಗರೂಕತೆ ವಹಿಸುತ್ತಿದ್ದರು. ಏಕಾಂತವಾಗಿ ಕಾಲನೂಕುವುದು ಅನಿವಾರ್ಯವಾಗಿತ್ತು. ಇಂಥ ಸನ್ನಿವೇಶಗಳು, ಜನರು ಆಡುವ ನಿಂದನಾ ಮಾತುಗಳು ನನ್ನ ಹೃದಯವನ್ನಿರಿಯುತ್ತಿರುವಾಗ ಕಣ್ಣೀರ ಧಾರೆಯು ಶಾಂತಗೊಳಿಸುತ್ತಿತ್ತು.

ಆದರೆ ನನ್ನಲ್ಲಿರುವ ಸರಳ, ಉತ್ತಮ ಗುಣಗಳು, ಲಲಿತಕಲಾ ಚಟುವಟಿಕೆಗಳು ಮತ್ತು ಉತ್ತಮ ರೀತಿಯ ಭೋಧನ ಕ್ರಮಗಳು ಮಕ್ಕಳ ಮತ್ತು ಜನರ ಮನವನ್ನು ಕ್ರಮೇಣ ಗೆಲ್ಲತೊಡಗಿದವು. ಶಾಲಾ ಮಕ್ಕಳಂತೂ, ನನ್ನನ್ನು ಅತಿಯಾಗಿ ಪ್ರೀತಿಸಲು ಪ್ರಾರಂಭಿಸಿದರು. ನನ್ನಲ್ಲಿರುವ ಗುಣಗಳನ್ನು ಪಾಂಡಿತ್ಯವನ್ನೂ ಪ್ರತಿಯೊಬ್ಬರೂ ಗೌರವಿಸತೊಡಗಿದರು. ಆದರೆ ನನ್ನ ಶರೀರವನ್ನು ಮಾತ್ರ ದ್ವೇಶಿಸುತ್ತಿದ್ದರು. ಶಾಲಾ ಮಕ್ಕಳು ಎಷ್ಟೇ ವಿಸ್ವಾಸದಿಂದಿದ್ದರೂ ಸಹಿತ ನನ್ನ ಸ್ಪರ್ಶವಾಗದಂತೆ ಜಾಗರೂಕತೆ ವಹಿಸುತ್ತಿದ್ದವು. ಒಂದು ದಿನ ಏಳನೆ ತರಗತಿಗೆ ಗಣಿತ ಭೋಧನೆ ಮಾಡುತ್ತಿರುವಾಗ ಚಂದ್ರಮ್ಮನೆಂಬ ಬಾಲಕಿ ಲೆಕ್ಕವನ್ನು ತಪ್ಪುಮಾಡಿದ ಕಾರಣ ಕೈಯಿಂದ ಒಂದೇಟು ಹೊಡೆದೆನು. ಅವಳು ದೂರ ಸರಿದು 'ಸರ್ ಕೋಲಿಂದ ಹೊಡೆಯಿರಿ' ಎಂದಳು. ಇನ್ನೊಂದು ದಿನ ಆರನೇ ತರಗತಿಗೆ ವಿಜ್ಞಾನ ಬೊಧನೆ ಮಾಡುವಾಗ ಕೇಳಿದ ಪ್ರಶ್ನೆಗೆ ಉತ್ತರಿಸದ ಕಾರಣದಿಂದ ರುದ್ರೇಗೌಡನೆಂಬ ಬಾಲಕನಿಗೆ ಕೈಯಿಂದ ಹೊಡೆದಾಗ ಅವನು ಸಹಿತ ದೂರ ಸರಿದು 'ಸರ್ ಕೈಯಿಂದ ಹೊಡೆಯಬೇಡಿ ಕೋಲಿಂದ ಹೊಡೆಯಿರಿ'' ಎಂದನು. ಕಾರಣ ಕೇಳಿದಾಗ ಉತ್ತರ ಶೂನ್ಯವಾಗಿತ್ತು. ಪೋಶಕರು 'ಹೊಲೆಯ ಉಪಾಧ್ಯಾಯರು ಶಾಲೆಗೆ ಬಂದಿದ್ದಾ

ರಂತೆ ಮುಟ್ಟಿಸಿಕೊಳ್ಳಬೇಡಿರಿ. ಆಕಸ್ಮಾತ್ ಮುಟ್ಟಿದರೆ ಸ್ನಾನಮಾಡಿ ಒಳಗೆ ಬನ್ನಿರಿ. ಪ್ರತಿದಿನ ಶಾಲೆಯಿಂದ ಬರುವಾಗ ಮನೆ ಒಳಗೆ ಬರುವ ಮೊದಲು ಸೆಗಣಿನೀರು ಹಾಕಿಕೊಂಡು ಬನ್ನಿರಿ'' ಎಂದು ಮಕ್ಕಳಿಗೆ ಎಚ್ಚರಿಕೆ ನೀಡಿದ್ದರಂತೆ. ಇದಕ್ಕೆ ತಪ್ಪಿದ ಮಕ್ಕಳಿಗೆ ಶಿಕ್ಷೆಕೊಡುತ್ತಿದ್ದರಂತೆ.

ದಲಿತ ವಿಧ್ಯಾರ್ಥಿಗಳನ್ನು ಶಾಲೆಯಲ್ಲಿ ಪ್ರತ್ಯೇಕವಾಗಿ ಕೂರಿಸುವುದು ಆಟವಾಡಿಸುವುದು ಪ್ರಾರ್ಥನಾ ಸಭೆಯಲ್ಲಿ ದೂರ ನಿಲ್ಲಿಸುವ ಪದ್ಧತಿ ಬೆಳೆದು ಬಂದಿತ್ತು. ಮೇಲ್ಜಾತಿ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ದಲಿತ ಮಕ್ಕಳನ್ನು ತುಚ್ಛಭಾವನೆಯಿಂದ ಕಾಣುತ್ತಿದ್ದರಿಂದ ಇವರು ಶಾಲೆಗೆ ಬರುತ್ತಿರಲಿಲ್ಲ. ಒಬ್ಬ ಬಾಲಕ ಯಾವಾಗಲೋ ಒಂದು ದಿನದಂತೆ ಬರುತ್ತಿದ್ದನು. ಈ ವಿದ್ಯಾರ್ಥಿಗಳಿಗೆ ಸಹಾನುಭೂತಿ ತೋರಿಸಿ ಅಭಯವನ್ನು ನೀಡಿ ತಿಳುವಳಿಕೆ ಹೇಳಿದ ಮೇಲೆ ಹದಿನಾರು ವಿಧ್ಯಾರ್ಥಿಗಳು ಶಾಲೆಗೆ ಬರಲಾರಂಬಿಸಿದರು: ಒಂದು ದಿನ ಪ್ರಾಥ ನಾ ಸಭೆಯಲ್ಲಿ ಕಾಪನ್ ಪ್ರಕಾರ ಎತ್ತರದವರು ಬಲಗಡೆ ಗಿಡ್ಡನವರು ಎಡಗಡೆ ಬರುವಂತೆ ಒಂದೇ ಸಾಲಿನಲ್ಲಿ ನಿಲ್ಲಿರಿ ಎಂದು ಹೇಳಿದೆನು. ಆಗ ದಲಿತ ವಿಧ್ಯಾರ್ಥಿಗಳು ಅವರ ಎತ್ತರದ ಪ್ರಕಾರ ಸಾಲಿನಲ್ಲಿ ನಿಂತುಕೊಳ್ಳಲು ಸಂಕೋಚ ಪಡುತ್ತಿರುವಾಗ, ನಾನು ಬಲವಂತದಿಂದ ಎಳೆದು ತಂದು ನಿಲ್ಲಿಸಿದೊಡನೆ. 'ಮೇಲ್ಜಾತಿಯ' ವಿದ್ಯಾರ್ಥಿಗಳು ಹಾವುಕಂಡವರಂತೆ ದೂರಸರಿದರು. ಕಾರಣವೇನು ಎಂದಾಗ ನಾವು ಹೊಲೆಯರನ್ನು ಮುಟ್ಟುವುದಿಲ್ಲ ಎಂದುತ್ತರಿಸಿದರು. ಕೋಗಬಂದಿದ್ದರೂ ಸಹಿತ ಸಹಿಸಿಕೊಂಡು ಸಮಾಧಾನದಿಂದ ತಿಳಿಹೇಳಿ ನಿಲ್ಲಿಸಿದೆನು! ತರಗತಿಗಳಲ್ಲಿ ಹಾಜರಿ ಕ್ರಮ ಸಂಖ್ಯೆ ಪ್ರಕಾರ ಕೂರಿಸುವುದು, ಒಟ್ಟಾರೆ ಸೇರಿಸಿ ಆಟವಾಡುವುದನ್ನು ಶುರುಮಾಡಿದೆ. ಮೊದಮೊದಲು ಕಷ್ಟವಾದರೂ ನಂತರ ಭೇದ ಭಿನ್ನವಿಲ್ಲದೆ ಶಾಲೆಯಲ್ಲಿ ಮಕ್ಕಳು ಆಡುವುದನ್ನು ಕೂಡುವುದನ್ನು ನೋಡಿ ಆನಂದಪಡುತ್ತಿದ್ದೆನು.

ಶಾಲೆಯಲ್ಲಿ ಬೆಟ್ಟದಂತೆ ಬೆಳೆದಿದ್ದ ಅಸ್ಪೃಶ್ಯತೆ ಮಂಜಿನಂತೆ ಕೆಳಗಿ ಮಾಯವಾಯಿತು, ಎಲ್ಲ ಮಕ್ಕಳೂ ಸಹಿತ ಜ್ಞಾನದ ಕಣ್ಣು ತೆರೆಸಿದ ಗುರುವೆಂದು ಪೂಜ್ಯಭಾವನೆಯಿಂದ ಕಾಣುತ್ತಿದ್ದರು. ಜೊತೆಗೆ ನನ್ನ ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ಸಹಕರಿಸುತ್ತಿದ್ದರು. ಅವರ ಪ್ರೀತಿ ವಾತ್ಸಲ್ಯವು ನನಗೆ ಸೋಪಾನವಾಯಿತು. ಏನು ಕೆಲಸ ಮಾಡುವಾಗಲೂ ಬೆಂಬಲಿಗರಾಗುತ್ತಿದ್ದರು. ಒಮ್ಮೆ ನಾನು ಬಾವಿಯಲ್ಲಿ ನೀರುಸೇದುತ್ತಿದ್ದ ಸಮಯದಲ್ಲಿ ನನ್ನಮೇಲೆ ಹಲ್ಲೆ ಮಾಡಲು ಬಂದವರನ್ನು ಪ್ರತಿಭಟಿಸಿ ನನ್ನ ರಕ್ಷಣೆ ಮಾಡಿದವರೂ ಶಾಲಾ ಮಕ್ಕಳೇ ಆಗಿದ್ದರು. ●

ನಾಕಂಡ ಗಾಂಧಿ – ನಗರ

(ಮೂರನೆ ಪುಟದಿಂದ)

ಹಗಲೆಲ್ಲಾ ದುಡಿದು ಬಂದು ಯಾವುದೋ ಗಡಂಗಿನ ಮೂಲೆಯಲ್ಲಿ ಅರ್‍ಯಾಕನ್ನೋ ಸೇಂದಿಯನ್ನೋ ಕುಡಿದು, ದನದ ಸುಟ್ಟ ಬಾಡು ತಿಂದು ಪದ ಹೇಳುತ್ತಾ ತೂಗಾಡುತ್ತಾ ತಿರುಗಾಡುವವರು ಸೀಮೆಂಟ್ ಲೈಟಿನ ಕಂಬದ ಮೇಲೆ ಸೀಮೆಸುಣ್ಣದಲ್ಲಿ ಬರೆಯಲ್ಪಟ್ಟ ಮಟ್ಕಾ ನಂಬರ್ ಓದುತ್ತಾ ಹೋಗುವ ''ಮಟ್ಕೇಶ್ವರರು''ಗಳು, ಇಸ್ಪೀಟು ಜೂಜಿನ ಗಲ್ಲಿ ಮನೆಗಳ ಜತೆಗೆ ಬ್ಲೂಫಿಲಂಗಳನ್ನು ಪ್ರದರ್ಶಿಸುವ ಅನಧಿಕೃತ ವೀಡಿಯೋ ಕೆಫೆಗಳು, ಅಕ್ಕಪಕ್ಕದ ಮನೆಗಳಿಗೆ ಗೊತ್ತೇ ಆಗುತ್ತಿಲ್ಲವೇನೋ ಎಂಬಂತೆ ವ್ಯವಹಾರದಲ್ಲಿ ನಿರತರಾದ ಸೂಳೆಯರು, ಕೆಟ್ಟ ಹಿಂದೀ ಹಾಡನ್ನು ಹಾಕಿಕೊಂಡು ರಾತ್ರಿಯಿಡೀ ಕದ್ದ ದನಗಳನ್ನು ರೆಡಿ ಮಾಡುವ ದನದ ಮಾಂಸದಂಗಡಿಗಳು-ಹೀಗೆ ರಾತ್ರಿ ಹತ್ತು ಗಂಟೆಯ ನಂತರ ಗಾಂಧೀನಗರವು ಬಿಚ್ಚಿಕೊಳ್ಳುತ್ತಾ ಕೆಲವರ ಕಣ್ಣಿಗೆ ಸತ್ತಂತೆ ಸತ್ತಿದ್ದರೂ ತಲೆಹಿಡುಕರಿಗೆ ಜೀವಂತವಾಗಿ ಕಾಣುತ್ತಾ ಹೋಯಿತು.

ಮೈಸೂರಿನ ಕೆಲವು ಗೆಳೆಯರ ದೇಹಕ್ಕೆ ಹಿಡಿದ ತುಕ್ಕು ನನ್ನ ಮೆದುಳನ್ನು ಆಕ್ರಮಿಸಬಹುದೆಂದು ಹೆದರಿದ್ದ ನನಗೆ ಗಾಂಧೀನಗರವು ಸಾವಿರಾರು ಅನುಭವಗಳ ಗಣಿಯಾಗಿ ಕಂಡಿತು. ಕಳೆದ ಮೂರು ವರ್ಷಗಳಲ್ಲಿ ಗಾಂಧಿನಗರದಲ್ಲಿ ಮೇಲ್ಕಂಡ ಪ್ರಕರಣ-1ನ್ನು ಹಲವಾರು ಬೀದಿಗಳಲ್ಲಿ ಹಲವಾರು ಬಾರಿ ಕಣ್ಣಾರೆ ಕಂಡೆ. ಪ್ರಕರಣ_2ನ್ನು ನೂರಾರು ಜನರ ಬಾಯಲ್ಲಿ ಕೇಳಿದೆ.

ತನ್ನ ತೊಡೆಗಳ ತುಂಬಾ ಕೀವು ತುಂಬಿಕೊಂಡ ಗಾಂಧೀನಗರದಂತಹ ನೂರಾರು ಗಾಂಧಿನಗರಗಳು ಇನ್ನು ಹತ್ತು ವರ್ಷಗಳಲ್ಲಿ ಯಾವ ಯಾವ ಕೆಟ್ಟ ಆಕೃತಿಗಳನ್ನು ಪಡೆದಿರುತ್ತಾವೆಂಬುದನ್ನು ನೆನೆದಾಗ ಗಾಂಧೀಜಿಯ ರಾಮರಾಜ್ಯದ ಕನಸು ನನ್ನ ಮೆದುಳಲ್ಲಿ ಯಾವ ಆಕೃತಿಯನ್ನು ಪಡೆಯದೆ ದೂರವಾಯಿತು.

ಪಂಚಮ

ಫಾರಂ iv (ರೂಲ್ ನೋಡಿ)

('ಪಂಚಮ' ಪತ್ರಿಕೆಯ ಮಾಲೀಕತ್ವ ಮತ್ತು ಇತರೆ ವಿವರ)

1, ಪ್ರಕಟಣೆಯ ಸ್ಥಳ :	ಮೈಸೂರು
2. ಪತ್ರಿಕೆಯ ಅವಧಿ :	ಹದಿನೈದು ದಿನಕ್ಕೊಮ್ಮೆ
3. ಭಾಷೆ :	ಕನ್ನಡ
4. ಸಂಪಾದಕ, ಪ್ರಕಾಶಕ, ಮುದ್ರಕರ ಹೆಸರು, ರಾಷ್ಟ್ರ, ವಿಳಾಸ :	ಎಚ್. ಗೋವಿಂದಯ್ಯ, ಭಾರತೀಯ 2514, ಕೆ. ಜಿ. ಕೊಪ್ಪಲು, ಮೈಸೂರು–570014
5. ಪತ್ರಿಕೆಯ ಮಾಲೀಕತ್ವ	ಇಂದೂಧರ ಹೊನ್ನಾಪುರ, ರಾಮದೇವರಾಕೆ, ಶಿವಾಜಿಗಣೇಶನ್, ಶಿವಮಲ್ಲ ದೇವನೂರು ಮತ್ತು ಗೋವಿಂದಯ್ಯ.

ಮೇಲೆ ಕಾಣಿಸಿರುವ ವಿವರಗಳು ನನ್ನ ಗ್ರಹಿಕೆ ಮತ್ತು ವಿಶ್ವಾಸದ ಪ್ರಕಾರ ಸರಿಯಾಗಿವೆಯೆಂದು ಈ ಮೂಲಕ ಹೇಳುತ್ತಿದ್ದೇನೆ.

5–3–1984

ಎಚ್. ಗೋವಿಂದಯ್ಯ
(ಪ್ರಕಾಶಕನ ಸಹಿ)

KRNN 106 PANCHAMA Fortnightly April 1984 Reg. No. 2561-76



418. ವಿ. ರತ್ನಮ್ಮ, ಚಿಕ್ಕ ತಿರುಪತಿ ಅಂಚೆ
ವೆಂಕಟೇಶಪುರ, ಮಾಲೂರು ತಾ:
ವಮತ್ತು ಹಳ್ಳಿ

...ಾದಕ: ಗೋ... ...2514, ಕೆ.ಜಿ. ಕೊಪ್ಪಲು, ಮೈಸೂರು-14. ಫೋನ್: 26142